# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 196 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 06.02.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 196 • PRGI No:KARKAN/2023/88055 • VIJAYANAGARA • 06.02.2025 • Thursday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+ Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038



Grow Your Business With Us

S.M.Traders & Services

Authorised Distributor for ATLAS COPCO Portable Screw Air Compressors for North Karnataka

Water Well and Non Water Well Applications

web: www.smtradersandservices.com

M: 9686663125 - 9686663132

Atlas Copco

Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka



ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



ಮನೆ ಬಾಡಿಗೆಗೆ ಇದೆ

ಹೊಸಪೇಟೆಯ ವಿವೇಕಾನಂದನಗರದಲ್ಲಿ ಶ್ರೀನಿವಾಸ ಅಪಾರ್ಟ್‌ಮೆಂಟ್ ಎದುರುಗಡೆ, ಸಮರ್ಪಕ (ಸಿಹಿ & ಬೋರ್‌ವೆಲ್) ನೀರಿನ ಸೌಲಭ್ಯ ಇರುವ ಡಬಲ್ ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಆಸಕ್ತರು ನೇರವಾಗಿ ಸಂಪರ್ಕಿಸಿ

M: 9909978170
M: 9448867485

ForAds:9448633038


# ಹೆಚ್ಚಿನ ಬಡ್ಡಿ ವಿಧಿಸಿದ್ರೆ ಕಠಿಣ ಶಿಕ್ಷೆಗೆ ಶಿಫಾರಸ್ಸು

## ಡಿಸಿ ಎಂ.ಎಸ್.ದಿವಾಕರ ಖಡಕ್ ಎಚ್ಚರಿಕೆ । ಭದ್ರತೆ ಸಾಲಗಳಿಗೆ ಗರಿಷ್ಠ ಶೇ.14, ಭದ್ರತೆ ಇಲ್ಲದ ಸಾಲಗಳಿಗೆ ಗರಿಷ್ಠ ಶೇ.16 ಮಾತ್ರ ಬಡ್ಡಿ ದರ



**■ ಹಂಪಿ ಟೈಮ್ಸ್ ಹೊಸಪೇಟೆ**

ಸಾಲಗಾರರ ಮನೆಯ ಮುಂದೆ ಗೋಡೆಬರಹದ ಮೂಲಕ ಸಾಲದ ಬಾಕಿ ಬರೆಯುವುದು, ಮಾನಸಿಕವಾಗಿ ನಿಂದಿಸುವುದು, ಅವಾಚ್ಯ ಶಬ್ದಗಳನ್ನು ಬಳಸುವುದು, ಅವಮಾನಿಸುವ ಪ್ರಕರಣಗಳು ಅಮಾನವೀಯವಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಮೈಕ್ರೋಫೈನಾನ್ಸ್ ಮತ್ತು ಹಣಕಾಸು ಸಂಸ್ಥೆಗಳಿಂದ ಸಾರ್ವಜನಿಕರಿಗೆ ಆಗುತ್ತಿರುವ ಕಿರುಕುಳ ಮತ್ತು ಸಂಸ್ಥೆಗಳ ಸಭೆ ಅಧ್ಯಕ್ಷತೆವಹಿಸಿ ಬುಧವಾರ ಮಾತನಾಡಿದರು, ಜಿಲ್ಲೆಯಲ್ಲಿ 105 ಮೈಕ್ರೋಫೈನಾನ್ಸ್‌ಗಳಿವೆ. ಮೈಕ್ರೋ ಫೈನಾನ್ಸ್‌ಗಳಿಂದ ತುರ್ತು ಸಂಧರ್ಭಗಳಲ್ಲಿ ಹಣ ಪಡೆಯಲಾಗಿರುವ ಸಾಲಗಾರರಿಗೆ ಆರ್‌ಬಿಐ ನಿರ್ದೇಶನದಂತೆ ನಿಯಮಾನುಸಾರ ಲೇವಾದೇವಿ ಸಂಸ್ಥೆ ಗಳು ಹೆಚ್ಚುವರಿ ಬಡ್ಡಿ ವಿಧಿಸುವಂತಿಲ್ಲ. ಭದ್ರತೆಯ ಸಾಲಗಳಿಗೆ ಗರಿಷ್ಠ ವಾರ್ಷಿಕ ಶೇ.14, ಭದ್ರತೆ ಇಲ್ಲದ ಸಾಲಗಳಿಗೆ ಗರಿಷ್ಠ ಶೇ.16 ರಷ್ಟು ಮಾತ್ರ ಕಡ್ಡಾಯವಾಗಿ ಬಡ್ಡಿ ದರವನ್ನು ವಿಧಿಸತಕ್ಕದ್ದು ಆದರೆ ಹೆಚ್ಚಿನ ಬಡ್ಡಿ ವಸೂಲಾತಿ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದರೆ ಶೀಘ್ರವೇ ಶಿಸ್ತು ಕ್ರಮ ಜರುಗಿಸಲಾಗುವುದು. ಸಾಲ ನೀಡುವ ಮುಂಚಿತವಾಗಿ ಸಾಲಗಾರರಿಗೆ ನಿಯಮಗಳನ್ನು ತಿಳಿಸಬೇಕು. ನಿಗಧಿತ ವೇಳೆಗೆ ಸಾಲ ಮರುಪಾವತಿಸದಿದ್ದರೇ ಸಾಲ ವಸೂಲಾತಿಗೆ ಹೊರಗುತ್ತಿಗೆ ಏಜೆನ್ಸಿಗಳಿಗೆ ನೀಡುವಂತಿಲ್ಲ. ವಸೂಲಾತಿಗೆ ತೆರಳುವ ವ್ಯಕ್ತಿ ಅಧಿಕೃತ ಮಾಹಿತಿಯೊಂದಿಗಿನ ಗುರುತಿನ ಚೀಟಿ ಸಹಿತ ವಸೂಲಾತಿಗೆ ಮುಂದಾಗಬೇಕು. ಕೊಟ್ಟೂರುನಲ್ಲಿ ಕಿರುಕುಳಕ್ಕೆ ಬೇಸತ್ತು ಮಹಿಳೆ ಆತ್ಮಹತ್ಯೆಗೆ ಯತ್ನಿಸಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಅವರನ್ನು ನಿಯಮಾನುಸಾರವಾಗಿ ಬಂಧಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಶಿಕ್ಷೆಯ ವಿಧಾನಗಳು, ದಂಡದ ಪ್ರಮಾಣಗಳನ್ನು ಸಭೆಯಲ್ಲಿ ತಿಳಿಸಲಾಯಿತು. ಅಂತಹ ಪ್ರಕರಣಗಳು ಕಂಡು ಬಂದರೆ ಅವಮಾನಿತರು ದೂರು ನೀಡದಿದ್ದರೂ, ಇಲಾಖೆಯಿಂದಲೇ ಸುಮೋಟೋ ಪ್ರಕರಣ ದಾಖಲಿಸಿ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು. ಮುಲಾಜಿಲ್ಲದೇ ಕಠಿಣ ಶಿಕ್ಷೆಗೆ ಶಿಫಾರಸ್ಸು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ವೇಳೆ ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಷಾ, ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಬಾಲಕೃಷ್ಣಪ್ಪ ಸೇರಿದಂತೆ ವಿವಿಧ ಮೈಕ್ರೋಫೈನಾನ್ಸ್ ಕಂಪನಿಗಳ ವ್ಯವಸ್ಥಾಪಕರು, ಸಿಬ್ಬಂದಿಗಳು ಇತರರಿದ್ದರು.



# ಹಂಪಿ ಉತ್ಸವ-2025 : ಕವಿಗೋಷ್ಠಿಗೆ ವಿಚಾರ ಸಂಕಿರಣಕ್ಕೆ ಅರ್ಜಿ ಅಹ್ವಾನ

## ಫೆಬ್ರವರಿ 12 ರೊಳಗೆ ಅರ್ಜಿ ಸಲ್ಲಿಕೆ । ಮೊ.9901106256, 9449654234 ಸಂಪರ್ಕಿಸಿ

**■ ಹಂಪಿ ಟೈಮ್ಸ್ ಹೊಸಪೇಟೆ**

ಫೆಬ್ರವರಿ 28 ಮತ್ತು ಮಾ.1-2 ರಂದು ನಡೆಯುವ ಅದ್ದೂರಿ ಹಂಪಿ ಉತ್ಸವದಲ್ಲಿ ಶ್ರೀವಿರೂಪಾಕ್ಷ ದೇವಸ್ಥಾನದ ವೇದಿಕೆಯಲ್ಲಿ ನಡೆಯುವ ಕವಿಗೋಷ್ಠಿ, ಮಹಿಳಾ ವಿಚಾರ ಸಂಕಿರಣ ಹಾಗೂ ಯುವ ಕವಿಗೋಷ್ಠಿಯಲ್ಲಿ ಭಾಗವಹಿಸುವ ಕವಿಗಳು ಹಾಗೂ ಆಸಕ್ತಿಯುಳ್ಳ ಮಹಿಳೆಯರು ಹಾಗೂ ಯುವ ಕವಿಗಳು ತಮ್ಮ ಸ್ವ-ವಿವರ ಹಾಗೂ ದಾಖಲಾತಿಗಳನ್ನು ನೇರವಾಗಿ ಅಥವಾ ಅಂಚೆಯ ಮೂಲಕ 'ನೋಡಲ್ ಅಧಿಕಾರಿಗಳು, ವಿರೂಪಾಕ್ಷ ವೇದಿಕೆ ಹಾಗೂ ಪ್ರಾಚಾರ್ಯರು, ಸರ್ಕಾರಿ ಪದವಿ ಪೂರ್ವ ಕಾಲೇಜು ಚಿತ್ತವಾಡಿಗಿ' ಇವರಿಗೆ ಫೆಬ್ರವರಿ 12 ರೊಳಗೆ ಅರ್ಜಿಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.




ಆಯ್ಕೆ ಸಮಿತಿಯಿಂದ ಮೇಲ್ಕಂಡ ವಿವಿಧ ಗೋಷ್ಠಿಗಳಿಗೆ ಆಯ್ಕೆಯಾದವರಿಗೆ ದೂರವಾಣಿ ಮೂಲಕ ತಿಳಿಸಲಾಗುವುದು. ಹೆಚ್ಚಿನ ವಿವರಗಳಿಗಾಗಿ ಜಗದೀಶ್ ಬೆನ್ನೂರು : ಮೊ.9901106256, ಡಾ.ದಯಾನಂದ ಕಿನ್ನಾಳ್ 9449654234 ಸಂಪರ್ಕಿಸಬಹುದು ಎಂದು ಚಿತವಾಡ್ಗಿ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಂಭಮೇಳಕ್ಕೆ ತೆರಳುವ ಯಾತ್ರಾರ್ಥಿಗಳಿಗೆ ಒಪ್ಪಂದದ ಮೇರೆಗೆ ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ

## ನಾನ್ ಎಸಿ ಸ್ಲೀಪರ್‌ಗೆ ಸೀಟಿಗೆ ರೂ 12500 । ವೇಗದೂತ ಸಾರಿಗೆ ರೂ 8500-9500

**■ ಹಂಪಿ ಟೈಮ್ಸ್ ಹೊಸಪೇಟೆ**



ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳಕ್ಕೆ ಹೊರಡುವ ಯಾತ್ರಾರ್ಥಿಗಳ ಅನುಕೂಲಕ್ಕೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಹೊಸಪೇಟೆ ವಿಭಾಗದಿಂದ ನಾನ್.ಎ.ಸಿ.ಸ್ಲೀಪರ್ ಮತ್ತು ವೇಗದೂತ ಸಾರಿಗೆ ಬಸ್‌ಗಳನ್ನು ಒಪ್ಪಂದದ ಮೇರೆಗೆ ಪಡೆಯಲು ಸೌಲಭ್ಯ ಕಲ್ಪಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಮ್ಮಾರೆಡ್ಡಿ ತಿಳಿಸಿದ್ದಾರೆ.

30 ಆಸನದ ನಾನ್.ಎಸಿ.ಸ್ಲೀಪರ್ ಸಾರಿಗೆ ಒಪ್ಪಂದಕ್ಕೆ ಒಂದನೇ ಮಾರ್ಗ ಹೊಸಪೇಟೆ-ವಿಜಯಪುರ-ಸೋಲಾಪುರ-ನಾಗಪುರ-ಜಬ್ಬಲಪುರ-ರೆವಾ-ಪ್ರಯಾಗರಾಜ್ ಒಟ್ಟು 3500 ಕಿ.ಮೀ ನಂತೆ ಒಟ್ಟು ಮೊತ್ತ 3,20,000 ರಂತೆ ಪ್ರತಿ ಒಬ್ಬ ಪ್ರಯಾಣಿಕರಿಗೆ ಅಂದಾಜು ಮೊತ್ತ 11000 ಆಗುತ್ತದೆ. ಎರಡನೇ ಮಾರ್ಗ ಹೊಸಪೇಟೆ-ವಿಜಯಪುರ-ಸೋಲಾಪುರ-ಛತ್ರಪತಿ-ದೋಲೆ-ಇಂದೋರ-ದೇವಾಸ್-ಗುನ್-ಶಿವಪುರಿ-ಜಾನ್ಸಿ-ಪ್ರಯಾಗರಾಜ್ ಒಟ್ಟು 4000 ಕಿ.ಮೀನಂತೆ ಒಟ್ಟು 3,65,000 ರಂತೆ ಪ್ರತಿ ಒಬ್ಬ ಪ್ರಯಾಣಿಕರಿಗೆ ಅಂದಾಜು ಮೊತ್ತ 12500 ಆಗುತ್ತದೆ.

47 ಆಸನದ ವೇಗದೂತ ಸಾರಿಗೆ ಒಪ್ಪಂದಕ್ಕೆ ಅಂದಾಜು ಕಿ.ಮೀ ವೇಗದೂತ ಸಾರಿಗೆ ಒಂದನೇ ಮಾರ್ಗ ಹೊಸಪೇಟೆ-ವಿಜಯಪುರ-ಸೋಲಾಪುರ-ನಾಗಪುರ-ಜಬ್ಬಲಪುರ-ರೇವಾ-ಪ್ರಯಾಗರಾಜ್ ಒಟ್ಟು 3500 ಕಿ.ಮೀ, ಒಟ್ಟು ಮೊತ್ತ 2,50,000 ರಂತೆ ಪ್ರತಿ ಒಬ್ಬ ಪ್ರಯಾಣಿಕರಿಗೆ 8500 ಅಂದಾಜು ಮೊತ್ತ ಆಗುತ್ತದೆ.

ಎರಡನೇ ಮಾರ್ಗ: ಹೊಸಪೇಟೆ-ವಿಜಯಪುರ-ಸೋಲಾಪುರ-ಛತ್ರಪತಿ-ದೋಲೆ-ಇಂದೋರ-ದೇವಾಸ್-ಗುನ್-ಶಿವಪುರಿ-ಜಾನ್ಸಿ-ಪ್ರಯಾಗರಾಜ್ ಒಟ್ಟು 4000 ಕಿ.ಮೀ, ಒಟ್ಟು ಮೊತ್ತ 2,85,000 ರಂತೆ ಪ್ರತಿ ಒಬ್ಬ ಪ್ರಯಾಣಿಕರಿಗೆ ಅಂದಾಜು ಮೊತ್ತ 9500 ಆಗುತ್ತದೆ. ಸಾರ್ವಜನಿಕ ಪ್ರಯಾಣಿಕರು, ಯಾತ್ರಾರ್ಥಿಗಳು ಈ ಸಾರಿಗೆ ಒಪ್ಪಂದದ ಮೇರೆಗೆ ಸೌಕರ್ಯದ ಸದುಪಯೋಗ ಪಡೆದುಕೊಳ್ಳಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ

HAMPI TIMES VIJAYANAGARA

ಹಂಪಿ ಟೈಮ್ಸ್ ಮತ್ತು ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಹಯೋಗದಲ್ಲಿ

ಈ ಬಾರಿ ಫಲಿತಾಂಶ ನಮ್ಮದೆ

SSLC ವಿದ್ಯಾರ್ಥಿಗಳಿಗಾಗಿ
ಫೋನ್ ಇನ್
ಕಾರ್ಯಕ್ರಮ

ಪರೀಕ್ಷೆ ಬಗ್ಗೆ ನಿಮಗಿರುವ ಆತಂಕಗಳು | ವಿಷಯ ವಸ್ತುಗಳ ಬಗೆಗಿನ ಅನುಮಾನ-ಗೊಂದಲ | ಪರೀಕ್ಷಾ ಸಿದ್ಧತೆ | ಭಯರಹಿತ ಪರೀಕ್ಷೆ ಎದುರಿಸುವ ಬಗೆ ಮತ್ತು ನಿಮ್ಮ ಇತರೆ ಪ್ರಶ್ನೆಗಳಿಗೆ ಕೆಳಗಿನ ನಂಬರ್‌ಗಳಿಗೆ ಕರೆಮಾಡಿ ನಿಮ್ಮ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳಿ

9 ಫೆಬ್ರವರಿ 2025 ಭಾನುವಾರ
ಸಮಯ ಬೆಳಿಗ್ಗೆ 11 ರಿಂದ 12 ವರೆಗೆ

ಬಿಇಒ ಎಂ.ಚನ್ನಬಸಪ್ಪ ಮತ್ತು ವಿಷಯ ತಜ್ಞರು ಪಾಲ್ಗೊಳ್ಳಲಿದ್ದಾರೆ

ಕನ್ನಡ 9880019171 / 7892989253
ಇಂಗ್ಲೀಷ್ 8317363832 / 9901735338
ಹಿಂದಿ 9845400842 / 9886500568
ಸಮಾಜ ವಿಜ್ಞಾನ 9964036271 / 8660953524
ವಿಜ್ಞಾನ 9945118741 / 9449020826
ಗಣಿತ 7892641428 / 8884816581

www.hampitimes.com
epaper.hampitimes.com

ಸೂಚನೆ: ಎಸ್ ಎಸ್‌ಎಲ್‌ಸಿ ವಿದ್ಯಾರ್ಥಿಗಳು ಕೇಳಬಯಸುವ ಪ್ರಶ್ನೆಗಳನ್ನು ಸ್ಪಷ್ಟವಾಗಿ ಬರೆದಿಟ್ಟುಕೊಂಡು ನಿಗದಿತ ಸಮಯದೊಳಗೆ ವಿದ್ಯಾರ್ಥಿಗಳು/ ಪಾಲಕರು ಕರೆ ಮಾಡಿ

## ಸ್ಟುಡೆಂಟ್ ಕಾಲಂ

# ಪಾಠದ ಜೊತೆಗೆ ಆಟವೂ ಮುಖ್ಯ




ಚಿಲಗೋಡು ಎಂಬ ಊರಿನಲ್ಲಿ ಮೋನೇಶ ಮತ್ತು ಮನೋಜ್ ಎಂಬ ಇಬ್ಬರು ಸ್ನೇಹಿತರಿದ್ದರು. ಇಬ್ಬರು ಸರ್ಕಾರಿ ಶಾಲೆಗೆ ಹೋಗುತ್ತಿದ್ದರು. ಅವರಿಗೆ ಶಿಕ್ಷಕರು ಮಾಡಿದ ಪಾಠ ಇಷ್ಟವಾಗುತ್ತಿರಲಿಲ್ಲ. ಯಾಕೆಂದರೆ ಅವರಿಗೆ ಪಾಠದಲ್ಲಿ ಆಸಕ್ತಿ ಇರಲಿಲ್ಲ. ಬದಲಾಗಿ ಆಟ ಅಂದರೆ ಹುಚ್ಚು. ಇಡೀ ದಿನ ಆಟದಲ್ಲಿ ತಲ್ಲೀನರಾಗಿರುತ್ತಿದ್ದರು. ಖೋ–ಖೋ ಆಟದ ಜೊತೆಗೆ ವೈಯಕ್ತಿಕ ಆಟಗಳನ್ನೂ ಆಡುತ್ತಿದ್ದರು. ಮೌನೇಶ್ ಓಟದಲ್ಲಿ ಪ್ರವೀಣನಾಗಿದ್ದ. ಮನೋಜ್ ಗುಂಡು ಎಸೆತ ಮತ್ತು ಚಕ್ರ ಎಸೆತದಲ್ಲಿ ಪ್ರಖ್ಯಾತನಾಗಿದ್ದ. ಗುಂಪು ಆಟದಲ್ಲಿ ಸೋತರೂ ವೈಯಕ್ತಿಕ ಆಟದಲ್ಲಿ ಇಬ್ಬರೂ ಹೆಸರು ಮಾಡಿದ್ದರು. ಇಬ್ಬರೂ ವೈಯಕ್ತಿಕ ಆಟದಲ್ಲಿ ರಾಜ್ಯಮಟ್ಟದವರೆಗೂ ಹೋಗಿ ಬಂದಿದ್ದರು.

ಆಟದಲ್ಲಿ ಮುಂದುವರೆಯುತ್ತಲೇ ಹೈಸ್ಕೂಲ್ ಮತ್ತು ಪಿಯುಸಿ ಮುಗಿಸಿದರು. ಪಿಯುಸಿ ಮುಗಿಸಿದ ನಂತರ ಪೋಲಿಸ್ ಹುದ್ದೆಗೆ ಅರ್ಜಿ ಸಲ್ಲಿಸಿದರು. ಇಬ್ಬರೂ ರಾಜ್ಯ ಮಟ್ಟದ ಆಟಗಾರರಾಗಿದ್ದರಿಂದ ಪೋಲಿಸ್ ಹುದ್ದೆ ಸುಲಭವಾಗಿ ದೊರೆಯಿತು. ಶಾಲಾ ದಿನಗಳಿಂದ ಆಟ ಮತ್ತು ಓಟಗಳಲ್ಲಿ ಭಾಗವಹಿಸಿದ್ದರಿಂದ ದೈಹಿಕ ಪರೀಕ್ಷೆಯಲ್ಲಿ ಸುಲಭವಾಗಿ ಯಶಸ್ವಿಯಾದರು. ಇಬ್ಬರಿಗೂ ಒಂದೇ ಕಡೆ ಕೆಲಸ ಮಾಡುವ ಅವಕಾಶವೂ ದೊರೆಯಿತು. ಇಡೀ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇಬ್ಬರ ಸ್ನೇಹ ಮತ್ತು ಪರಿಶ್ರಮದ ಬಗ್ಗೆ ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು.

**– ಜೀವನ್ ಕುಮಾರ್. ಕೆ. 9ನೇ ತರಗತಿ,**
**ಸರ್ಕಾರಿ ಪ್ರೌಢಶಾಲೆ ಬಸರಕೋಡು ಹಗರಿಬೊಮ್ಮನಹಳ್ಳಿ(ತಾ)**

## ಆನಂದ ಬಾಣ




### ಉದುರಿದ ಎಲೆ ಧರಾಶಾಯಿಯಾಗಿ ಕಣಿವೆಯ ಆಳವನ್ನೂ ಪೇರಬಲ್ಲದು ಹಿಮಾಲಯ ಪರ್ವತದ ನೆತ್ತಿಯನ್ನು ಚುಂಬಿಸಬಹುದು...

# ದೀರ್ಘವಾದ ಕಾಯುವಿಕೆಗೂ ಒಂದು ಅಂತ್ಯವಿದೆ

## ಗೆಳತಿಗೊಂದು ಪತ್ರ



ಪ್ರೀತಿಯ ಗೆಳತಿ,

ಉಭಯ ಕುಶಲೋಪರಿಯನ್ನು ಕೇಳುವ ಮನಸ್ಥಿತಿಯಲ್ಲಿ ನಾನಿಲ್ಲ... ಚೆನ್ನಾಗಿದ್ದೇನೆ ಎಂದು ಹೇಳುವ ಸಿನಿಕತೆ ನಿನ್ನಲ್ಲಿಲ್ಲ. ನೇರ ವಿಷಯಕ್ಕೆ ಬರುತ್ತೇನೆ.

ಜಾರ್ಜ್ ಆರ್ವೆಲ್ ಎಂಬ ಪ್ರಸಿದ್ಧ ವ್ಯಕ್ತಿ ಹೇಳಿದ ಒಂದು ಮಾತು ಹೀಗಿದೆ 'ಅತ್ಯಂತ ಭೀಕರವಾದ ಏಕಾಂತ ಎನ್ನುವುದು ಒಬ್ಬರೇ ಇರುವುದರಿಂದ ಸಂಭವಿಸುವುದಿಲ್ಲ.. ಬೇರೆಯವರು ನಮ್ಮನ್ನು ತಪ್ಪಾಗಿ ಭಾವಿಸಿದಾಗ ಒಂದು ತುಂಬಿದ ಕೋಣೆಯಲ್ಲಿ ಜನರಿಂದ ಸುತ್ತುವರಿದಿದ್ದರೂ ಕೂಡ ನಮಗೆ ನಾವು ಏಕಾಂಗಿ ಎಂದು ಭಾಸವಾಗುತ್ತದೆ. ನಿನ್ನನ್ನು ನೋಡಿಯೂ ನೋಡದಂತೆ, ಕೇಳಿಯೂ ಕೇಳದಂತೆ! ನಿನ್ನ ನೈಜವಾದ ವ್ಯಕ್ತಿತ್ವವನ್ನು ಅರಿತು ಕೂಡ ಅರಿಯದಂತೆ ವರ್ತಿಸಿದಾಗ ನಿನಗೆ ಮಬ್ಬು ಮುಸುಕಿದಂತೆ ಭಾಸವಾಗುತ್ತದೆ, ನೀನು ಇದ್ದೂ ಇಲ್ಲದಂತೆ ಭಾಸವಾಗುತ್ತದೆ. ನಿನ್ನದೇ ಹಿಂದಿನ ವ್ಯಕ್ತಿತ್ವದ ನೆರಳಾಗಿ ಗೋಚರಿಸುವ ಬದುಕಿನಲ್ಲಿ ನಾವು ನಗಣ್ಯರಾದಾಗ ಉಂಟಾಗುವ ಒಂಟಿತನದ ನೋವು ಅಸದಳ.

ನಮ್ಮನ್ನು ಸುತ್ತುವರಿದ ಜನ ಸ್ನೇಹಿತರು, ಸಂಬಂಧಿಗಳು, ಕುಟುಂಬ ಮತ್ತು ಸಹೋದ್ಯೋಗಿಗಳು ಇದ್ದರೂ ಕೂಡ ಹೃದಯದ ಮೂಲೆಯನ್ನು ಒತ್ತಿ ನೋಯಿಸುವ ಒಂಟಿತನ ಬದುಕಿನಲ್ಲಿ ನಿರಾಶೆಯನ್ನು ಹುಟ್ಟಿಸುತ್ತದೆ.

ಅದೇನೇ ಬಾಹ್ಯ ಜಗತ್ತಿನ ಮುಂದೆ ನೀನು ಉಂಡು, ತಿಂದು, ಕೆಲಸ ಮಾಡುತ್ತಾ, ನಸು ನಗುತ್ತಾ ವ್ಯವಹರಿಸಬಹುದು ಆದರೆ ಆಂತರಿಕವಾಗಿ ಪದಗಳಲ್ಲಿ ವ್ಯಕ್ತಪಡಿಸಲಾಗದಷ್ಟು ಒಬ್ಬಂಟಿತನ ನಿನ್ನನ್ನು ಕಿತ್ತು ತಿನ್ನುತ್ತದೆ.

ನಿನ್ನನ್ನು ಯಾರೂ ಅರ್ಥ ಮಾಡಿಕೊಳ್ಳುತ್ತಿಲ್ಲ, ನಿನ್ನ ನಿಜವಾದ ವ್ಯಕ್ತಿತ್ವ ಮರೆಯಾ ಗಿದ್ದು ಜಗತ್ತು ನಿನ್ನ ಭೌತಿಕ ದೇಹದಲ್ಲಿ ಬೇರೊಬ್ಬರನ್ನು ಕೂಡಿಸಬಯಸುತ್ತದೆ ಎಂಬ ಭಾವ ನಿನ್ನನ್ನು ಇನ್ನಿಲ್ಲದಂತೆ ಕಿತ್ತು ತಿನ್ನುತ್ತದೆ. ಇಂತಹ ಒಂಟಿತನ ಅತ್ಯಂತ ಕಠಿಣ ಮತ್ತು ಅಪಾಯಕಾರಿ ಕೂಡ. ಇದು ನಿನ್ನ ಸುತ್ತ ಜನರು ಇಲ್ಲ ಎಂಬುದರ ಕೊರತೆಯಲ್ಲ ಬದಲಾಗಿಬೇರೊಬ್ಬರೊಂದಿಗೆ ನಿನಗೆ ಸಂವಹನ ಸಾಧ್ಯವಾಗುತ್ತಿಲ್ಲ ಎಂಬ ನೋವು, ಆತಂಕ, ಸಂಕಟ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಇಂತಹ ಸಮಯದಲ್ಲಿ ನೀನು ನಿನ್ನನ್ನು ಹೃದಯ ಅಂತರಾಳದಿಂದ ಅರಿಯುವ, ಅರ್ಥಮಾಡಿಕೊಳ್ಳುವ ನಿನ್ನ ನೋವಿಗೆ ಮುಲಾಮು ಸವರುವ ಸ್ನೇಹಿತರನ್ನು ಹುಡುಕುವೆ. ನಿನ್ನ ಮನದ ಮಾತುಗಳಿಗೆ ಕಿವಿಯಾಗುವ, ನಿನ್ನ ಕನಸುಗಳನ್ನು ಕೇಳುವ ನಿನ್ನಮನದಗೊಂದಲಗಳನ್ನು ಪರಿಹರಿಸುವ ಒಂದೊಳ್ಳೆ ಸಾಂಗತ್ಯದ ಅವಶ್ಯಕತೆ ನಿನಗಿದೆ.

ಆದರೆ ಯಾರಾದರೂ ಒಬ್ಬರು ನಿನ್ನನ್ನು ತಪ್ಪಾಗಿ ತಿಳಿದುಕೊಂಡರೆ ನಿನ್ನ ಅಂತರಂಗ ಮತ್ತು ಬಹಿರಂಗಗಳ ನಡುವೆ ಬಹುದೊಡ್ಡ ಕಂದಕ ಏರ್ಪಡುತ್ತದೆ. ಗಾಜಿನ ಪರದೆಯ ಹಿಂದೆ ನಿಂತಿರುವ ಯಾರಾದರೂ ಒಬ್ಬರು ಇಣುಕಿ ನೋಡಿ ನಿನಗೆ ಸಹಾಯ ಹಸ್ತ ಚಾಚಲಿ ಎಂಬ ಅತೀವ ಆಶಯ ನಿನ್ನದಾಗಿರುವಂತೆ ಭಾಸವಾಗುತ್ತದೆ.

ನೀನು ನಗಣ್ಯ ಎಂದು ಭಾವಿಸುವ ಸಮಯದಲ್ಲಿ ನಿನ್ನನ್ನು ನೀನು ಪ್ರಶ್ನಿಸಿಕೊಳ್ಳಲಾರಂಭಿಸುತ್ತಿರುವೆ.. ನಿನ್ನನ್ನು ನೀನು ಜಗವು ನೋಡ ಬಯಸುವ ರೀತಿಯಲ್ಲಿ, ಒಪ್ಪಿಕೊಳ್ಳುವ ರೀತಿಯಲ್ಲಿ ಬದಲಾಯಿಸಿಕೊಳ್ಳಲು ಪ್ರಯತ್ನಿಸಲು ಬಯಸಿ ಸೋತು ಹೋಗುತ್ತಿರುವೆ. ಬಹಿರಂಗವಾಗಿ ನೀನು ಸಾಮಾಜಿಕ ಪರಿಗಣನೆಯನ್ನು ಬಯಸಿದರೂ ಆಂತರಿಕವಾಗಿ ನೀವಲ್ಲದ ನಿಮ್ಮನ್ನು ಒಪ್ಪಿಕೊಳ್ಳಲು ಒದ್ದಾಡುತ್ತೀರಿ... ಆಗ ಒಬ್ಬಂಟಿತನ ಕಡಿಮೆಯಾಗುವುದಿಲ್ಲ ಮತ್ತಷ್ಟು ಹೆಚ್ಚಾಗುತ್ತದೆ. ನಿನ್ನ ನಿಜವಾದ ವ್ಯಕ್ತಿತ್ವವನ್ನು ನೀನು ಕಳೆದುಕೊಂಡಾಗ ನಿನ್ನದೇ ದೇಹದ ಅಂಗ ನಿನ್ನಿಂದ ಕಿತ್ತುಹೋದಷ್ಟು ನೋವು ನಿನ್ನನ್ನು ಬಾಧಿಸುತ್ತದೆ.

ನೀನು ನಿನ್ನದೇ ಈ ಹಿಂದಿನ ವ್ಯಕ್ತಿತ್ವದ ನೆರಳಾಗಿ ಭೂತವಾಗಿ ಯಾರಾದರೂ ಸಹೃದಯರು ನಿನ್ನನ್ನು ಅರ್ಥಮಾಡಿಕೊಳ್ಳಲಿ ಎಂಬ ಭರವಸೆಯ ಭಾವದಿಂದ ಮೌನವಾಗಿದ್ದೆ.ಅಳುವ ಕೂಸನ್ನೆ ಗಮನಿಸಲಾಗುವುದಿಲ್ಲ.... ಇನ್ನು ಅಳದಿರುವ ಕೂಸನ್ನು ಯಾರು ಗಮನಿಸಲು ಸಾಧ್ಯ .

ಯಾರೂ ನನ್ನನ್ನು ಪ್ರೀತಿಸುತ್ತಿಲ್ಲ ಎಂಬ ನೋವಿಗಿಂತ ಯಾರು ನನ್ನನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂಬ ನೋವಿನ ಭಾವ ಮನವನ್ನು ಹೆಚ್ಚು ಕಾಡುತ್ತದೆ. ನಿನ್ನ ಬದುಕಿನ ಗೋಜಲಾದ, ಕಿರಿಕಿರಿಯ, ಅಸ್ತವ್ಯಸ್ತವಾದ, ಒಳಗಿಂದೊಳಗೆ ಬಿರುಕು ಬಿಟ್ಟ ಇಲ್ಲವೇ ಮುರಿದು ಹೋದ ನಿನ್ನ ವ್ಯಕ್ತಿತ್ವದ ಒಳಗೆ ಇಣುಕಿ ನಾನು ನಿನ್ನನ್ನು ನೋಡಬಲ್ಲೆ ಅರ್ಥಮಾಡಿಕೊಳ್ಳಬಲ್ಲೆ ಮತ್ತು ಯಾವುದೇ ರೀತಿಯ ನಿರ್ಣಯಾತ್ಮಕ ಹೇಳಿಕೆಗಳನ್ನು ಕೊಡದೆ ನಿನ್ನ ಜೊತೆ ನೀಡಬಲ್ಲೆ, ಎಂದು ಹೇಳುವ ಸ್ನೇಹಿತರು ಬೇಕು.

ನಿನ್ನ ಮನದ ಕೋಣೆಯ ಕದ ತೆರೆದು ನಿನ್ನ ಅಂತರಂಗದ ಪಿಸು ಮಾತುಗಳನ್ನು ಕೂಡ ಆಲಿಸವಲ್ಲ ಸ್ನೇಹಿತರು ಬೇಕೇ ಬೇಕು. ಅಂತಹ ಅಪರಿಮಿತ ಒಬ್ಬಂಟಿತನದಲ್ಲೂ ಒಂದು ತಣ್ಣಗಿನ ಮೌನ ಗಟ್ಟಿತನ ನಿನ್ನ ಶಕ್ತಿಯಾಗಿರಲಿ. ನಿನ್ನ ವ್ಯಕ್ತಿತ್ವವನ್ನು ಮತ್ತೆ ಜೀವಂತವಾಗಿಸಿಕೊಳ್ಳುವ ಬದುಕಿನ ಉತ್ಸಾಹ ಮತ್ತೆ ನಿನ್ನಲ್ಲಿ ಒಡಮೂಡಲಿ. ನಿನ್ನ ಎಲ್ಲ ಧೈರ್ಯವನ್ನು ಒಗ್ಗೂಡಿಸಿಕೊಂಡು ಬದುಕು ಒಡ್ಡುವ ಸವಾಲುಗಳನ್ನು ಎದುರಿಸಿ ಹೋರಾಡುವ ಚೈತನ್ಯ ಶಕ್ತಿ ನಿನ್ನದಾಗಲಿ. ಜನರು ನಿನ್ನನ್ನು ಅರ್ಥೈಸಿಕೊಳ್ಳುತ್ತಿಲ್ಲ ಎಂದು ನಿನ್ನದೇ ಬದುಕಿನ ಭರವಸೆಯ ದೀಪವನ್ನು ನಂದಿಸದಿರು.

ಬೇರೆಯವರಿಗೆ ನೀನು ಕಾಣಿಸದಿರಬಹುದು ಆದರೆ ನಿನ್ನ ವ್ಯಕ್ತಿತ್ವದ ಅತ್ಯುತ್ತಮ ಭಾಗ ಮತ್ತು ಅತ್ಯಂತ ಸಂಕೀರ್ಣತೆಗಳನ್ನು ನೀನು ಮಾತ್ರ ಆರಂಭಿಸಿಕೊಂಡಿರುವೆ... ಅದುವೇ ನಿನ್ನನ್ನು ಸಾಮಾನ್ಯರಲ್ಲಿ ಅಸಾಮಾನ್ಯಳಾಗಿ ನಿಲ್ಲಿಸುತ್ತದೆ. ನಿನ್ನಲ್ಲಿರುವ ಆ ಮೌಲ್ಯವನ್ನು ಗುರುತಿಸು, ಗೌರವಿಸು ಮತ್ತು ಪೋಷಿಸು.

ಮತ್ತೆ ಕೆಲವೊಮ್ಮೆ ಬೇರೆಯವರು ನಿನ್ನನ್ನು ತಪ್ಪರ್ಥ ಮಾಡಿಕೊಳ್ಳುತ್ತಾರೆ ಎಂದಾದಾಗ ಅದು ನಿನ್ನನ್ನು ನೀನು ಮತ್ತಷ್ಟು ಹೆಚ್ಚು ಅರ್ಥ ಮಾಡಿಕೊಳ್ಳಲು ಪ್ರೇರೇಪಿಸುತ್ತದೆ... ಈ ಜಗತ್ತು ಒಪ್ಪಲಿ ಬಿಡಲಿ ಆದರೆ ನೀನು ಇರುವ ರೀತಿಯಲ್ಲಿಯೇ ನಿನ್ನನ್ನು ನೀನು ಒಪ್ಪಿಕೊಳ್ಳಲು ಅಪ್ಪಿಕೊಳ್ಳಲು ಶಾಂತ ಮನಸ್ಥಿತಿಯನ್ನು ಕಾಯ್ದುಕೊಳ್ಳಲು ಮಾನಸಿಕವಾಗಿ ಗಟ್ಟಿಯಾಗಲು ನಿನ್ನನ್ನು ಪ್ರೇರೇಪಿಸುತ್ತದೆ. ಅಂತಹ ಸಮಯದಲ್ಲಿ ನಿನ್ನ ಮನಸ್ಸಿನ ಮಾತುಗಳಿಗೆ ಕಿವಿಗೊಟ್ಟಾಗ ನೀನು ಒಬ್ಬಂಟಿಯಲ್ಲ ಎಂಬ ಚೈತನ್ಯ ಶಕ್ತಿ ನಿನ್ನನ್ನು ಬಡಿದೆಬ್ಬಿಸುತ್ತದೆ. ಬದುಕಿನಲ್ಲಿ ನಿನ್ನಂತೆಯೇ ತೊಂದರೆಗೊಳಗಾಗಿರುವವರನ್ನು ಅರ್ಥ ಮಾಡಿಕೊಳ್ಳುವ, ಸಂತೈಸುವ, ಧೈರ್ಯ ತುಂಬುವ ಮೂಲಕ ಬದುಕಿನೆಡೆ ಮುಖ ಮಾಡುವಂತೆ ಪೋಷಿಸುವಂತೆ ನಿನ್ನ ವ್ಯಕ್ತಿತ್ವದ ಗಾತ್ರವನ್ನು ಹಿರಿದಾಗಿಸಿಕೋ. ಆಗ ನಿನ್ನ ಮಾತನ್ನು ನೀನು ಹೇಳದೆಯೂ ಕೇಳುವ, ನೀನಿಲ್ಲದಿದ್ದರೂ ನಿನ್ನನ್ನು ಗುರುತಿಸುವ ಅನುಭವಿಸುವ, ಅರ್ಥ ಮಾಡಿಸಲು ಪ್ರಯತ್ನಿಸದಿದ್ದರೂ, ನೀನು ಅವರಿಂದ ನಿರೀಕ್ಷಿಸದೆ ಹೋದರೂ ಕೂಡ ನಿನ್ನನ್ನು ಅರ್ಥೈಸಿಕೊಳ್ಳುವವರು ಸಾಲುಗಟ್ಟಿ ನಿಲ್ಲುತ್ತಾರೆ.

ಆದ್ದರಿಂದ ಗೆಳತಿ... ನಿನ್ನ ಬದುಕಿನ ಸಾರವನ್ನು ಉಳಿಸಿಕೋ, ಬದುಕಿನ ಪಯಣದಲ್ಲಿ ತುಸು ಹೊತ್ತು ಒಬ್ಬಂಟಿಯಾಗಿ ನಿಂತರೂ ಪರವಾಗಿಲ್ಲ ನಿನ್ನ ನೆರಳೇ ನೀನಾಗದಿರು. ನಿನ್ನ ನಿಜವಾದ ವ್ಯಕ್ತಿತ್ವವನ್ನು ನೀನು ಅನುಭವಿಸು ಜೀವಿಸು ಆನಂದಿಸು.. ಅದೆಷ್ಟೇ ದೀರ್ಘವಾದ ಕಾಯುವಿಕೆಗೂ ಒಂದು ಅಂತ್ಯವಿದೆ ನಿನ್ನೊಳಗಿನ ನಿನ್ನತನವೆಂಬ ವ್ಯಕ್ತಿತ್ವವನ್ನು ಬಲಿ ಕೊಡದಿರು. ನಿನ್ನೊಳಗಿನ ಬದುಕಿನ ಸಾರ ಮಸುಕಾಗದಿರಲು ಬಿಡದಿರು ಮತ್ತಷ್ಟು ಉಜ್ವಲವಾಗಿ ಬೆಳಗಲು ಅವಕಾಶ ಮಾಡಿಕೊಡು.... ಆ ಬೆಳಕಿನಲ್ಲಿ ನಿನ್ನಂತೆಯೇ ಇರುವ ನೂರಾರು ಜನರು ತಮ್ಮ ಬದುಕಿನ ಭರವಸೆಯನ್ನು ಕಂಡುಕೊಳ್ಳಲಿ.

ಎಲ್ಲೋ ಓದಿದ ಮತ್ತೊಂದು ಮಾತಿನೊಂದಿಗೆ ಮುಗಿಸುತ್ತೇನೆ.... ಗಿಡದಿಂದ ಉದುರಿದ ಎಲೆ ಧರಾಶಾಯಿಯಾಗಿ ಕಣಿವೆಯ ಆಳವನ್ನೂ ಪೇರಬಲ್ಲದು ಹಿಮಾಲಯ ಪರ್ವತದ ನೆತ್ತಿಯನ್ನು ಚುಂಬಿಸಬಹುದು..... ಆಯ್ಕೆ ನಿನ್ನದು ಬದುಕು ಕೂಡ ನಿನ್ನದೇ.

ಏನಂತೀಯಾ? ಬೇಗನೆ ಉತ್ತರಿಸು...

## ಬೆಳಕಿನ ಹಾದಿ

# ಅವಸರದ ಸ್ವಭಾವ ಒಳಿತಲ್ಲ



ಒಬ್ಬ ರಾಜನಿದ್ದ. ಆತ ಯಾವುದೇ ವಿಷಯದ ಕುರಿತು ಮುಂದಾಲೋಚನೆ ಮಾಡದೆ ನಿರ್ಧಾರ ಕೈಗೊಳ್ಳುತ್ತಿದ್ದ. ಒಮ್ಮೆ ರಾಜ ತನ್ನ ಅರಮನೆಯ ಉಪ್ಪರಿಗೆಯ ಮೇಲೆ ಕುಳಿತುಕೊಂಡಿದ್ದ. ಆಗ ದೂರದಲ್ಲಿ ಹರಿಯುತ್ತಿರುವ ನದಿಯೊಂದು ಆತನ ಕಣ್ಣಿಗೆ ಬಿತ್ತು. ತನ್ನ ಮಂತ್ರಿಯನ್ನು ಕರೆದು 'ಆ ನದಿ ಯಾವ ದಿಕ್ಕಿನಿಂದ ಯಾವ ದಿಕ್ಕಿನವರೆಗೆ ಹರಿಯುತ್ತಿದೆ?' ಎಂದು ಕೇಳಿದ. ಅದಕ್ಕೆ ಮಂತ್ರಿ 'ಅದು ಪಶ್ಚಿಮದಿಂದ ಪೂರ್ವದೆಡೆಗೆ ಹರಿಯುತ್ತಿದೆ' ಎಂದು ತಿಳಿಸಿದ.

'ಹಾಗಾದರೆ ಪೂರ್ವ ದಿಕ್ಕಿನಲ್ಲಿರುವ ರಾಜ್ಯದವರೂ ಆ ನದಿಯ ನೀರನ್ನು ಬಳಸುತ್ತಿರಬಹುದಲ್ಲವೆ?' ಎಂದು ಕೇಳಿದ ರಾಜ. 'ಹೌದು ಬಳಸುತ್ತಿದ್ದಾರೆ' ಎಂದ ಮಂತ್ರಿ.

'ನನ್ನ ರಾಜ್ಯದಿಂದ ಹಾದು ಹೋಗುವ ನೀರನ್ನು ಅವರೇಕೆ ಬಳಸಬೇಕು? ಕೂಡಲೇ ನದಿಗೆ ತಡೆಗೋಡೆಯನ್ನು ಕಟ್ಟಿ ನೀರು ಮುಂದೆ ಹೋಗದಂತೆ ತಡೆಯಿರಿ' ಎಂದು ಆಜ್ಞಾಪಿಸಿದ. ರಾಜಾಜ್ಞೆಯಂತೆ ನದಿಗೆ ತಡೆಗೋಡೆಯನ್ನು ಕಟ್ಟಲಾಯಿತು. ನದಿಯ ನೀರು ರಾಜಧಾನಿಯನ್ನು ಪ್ರವೇಶಿಸಿ, ತಗ್ಗು ಪ್ರದೇಶದಲ್ಲಿದ್ದ ಮನೆಗಳಿಗೆ ನೀರು ನುಗ್ಗಿತು. ಆದರೆ ಶೀಘ್ರ ಕುಪಿತನಾಗುವ ರಾಜನಿಗೆ ದೂರು ನೀಡಲು ಯಾವ ಪ್ರಜೆಯೂ ಧೈರ್ಯ ಮಾಡಲಿಲ್ಲ. ಕೊನೆಗೆ ಪ್ರಜೆಗಳೆಲ್ಲ ಮಂತ್ರಿಯ ಮೊರೆಹೋದರು.



ಮಂತ್ರಿಗೆ ಒಂದು ಯೋಚನೆ ಹೊಳೆಯಿತು. ರಾಜನ ಕಾಲದಲ್ಲಿ ಸಮಯವನ್ನು ತಿಳಿಯಲು ಒಂದೊಂದು ತಾಸಿಗೂ ಗಂಟೆಯನ್ನು ಬಾರಿಸುತ್ತಿದ್ದರು. ಹೀಗಿರುವಾಗ, ಒಮ್ಮೆ ರಾತ್ರಿ ಮೂರು ಗಂಟೆಗೆ ಆರು ಗಂಟೆಗಳನ್ನು ಬಾರಿಸುವಂತೆ ಮಂತ್ರಿ ಗಂಟೆ ಬಾರಿಸುವವನಿಗೆ ಸೂಚಿಸಿದ. ಮಂತ್ರಿ ತಿಳಿಸಿದಂತೆ ಆರು ಗಂಟೆಗಳನ್ನು ಬಾರಿಸಲಾಯಿತು. ಬೆಳಗಾಯಿತೆಂದು ರಾಜ ಎದ್ದ. ನೋಡಿದರೆ ಎಲ್ಲೆಲ್ಲೂ ಗಾಢಾಂಧಕಾರ, ಆಗ ರಾಜ ಮಂತ್ರಿಯನ್ನು ಕರೆದು 'ಆರು ಗಂಟೆಯಾದರೂ ಇಂದು ಏಕೆ ಬೆಳಕು ಹರಿದಿಲ್ಲ?' ಎಂದು ಕೇಳಿದ.


'ಮಹಾರಾಜ ನದಿಯ ನೀರಿಗೆ ತಡೆಗೋಡೆ ನಿರ್ಮಿಸಿದರಿಂದ ಪೂರ್ವದ ಕಡೆಗೆ ಇರುವ ರಾಜರಿಗೆ ಕೋಪ ಬಂದಿದೆ. ಆದ್ದರಿಂದ ಅವರು ಸೂರ್ಯನನ್ನು ನಮ್ಮ ರಾಜ್ಯದ ಕಡೆಗೆ ಬರಲು ಬಿಡುತ್ತಿಲ್ಲ. ಇನ್ನು ಮುಂದೆ ನಮಗೆ ಕತ್ತಲೆಯೇ ಗತಿ' ಎಂದು ಹೇಳಿದ. ಮಂತ್ರಿಯ ಮಾತನ್ನು ಕೇಳಿದ ರಾಜ ಹಗಲೇ ಆಗದಿದ್ದರೆ ನಿತ್ಯದ ವ್ಯವಹಾರಗಳು ಸಾಗುವುದಾದರೂ ಹೇಗೆ?ಎಂದು ಚಿಂತಿತನಾದ.

ನದಿಗೆ ಕಟ್ಟಿದ ತಡೆಗೋಡೆಯನ್ನು ಕೂಡಲೇ ಕೆಡವಿಸಿ ಬಿಡಿ ಎಂದು ರಾಜ ಮಂತ್ರಿಗೆ ಆಜ್ಞಾಪಿಸಿದ. ಮಂತ್ರಿ ಗೋಡೆಯನ್ನು ಕೆಡವಲು ಸಾವಿರಾರು ಆಳುಗಳನ್ನು ಕಳುಹಿಸಿದ, ಅವರು ಗೋಡೆಯನ್ನು ಕೆಡವಿ ಮುಗಿಸುವುದಕ್ಕೂ, ಬೆಳಗಾಗುವುದಕ್ಕೂ ಸರಿಹೋಯಿತು. ಸೂರ್ಯ ಉದಯಿಸುತ್ತಿರುವುದನ್ನು ಕಂಡು ರಾಜನ ಮೊಗದ ಮೇಲೆ ಮಂದಹಾಸ ಮೂಡಿತು. ಅಂದಿನಿಂದ ರಾಜ ಅವಸರದಲ್ಲಿ ನಿರ್ಣಯ ತೆಗೆದುಕೊಳ್ಳುವ ತನ್ನ ಸ್ವಭಾವವನ್ನು ಬದಲಿಸಿಕೊಂಡ.

ಅವಸರವೇ ಅವಿವೇಕಕ್ಕೆ ಕಾರಣ.ಅವಸರದ ನಿರ್ಧಾರಗಳು ಸಲ್ಲ.ಇವು ನಮ್ಮ ಕುತ್ತಿಗೆಗೆ ಉರುಳಾಗಬಹುದು. ನಾವು ಕೈಗೊಳ್ಳುವ ಯೋಜನೆಗಳು ದೂರಾಲೋಚನೆ ಹೊಂದಿರ ಬೇಕೇ ವಿನಃ ದುರಾಲೋಚನೆಗೆ ನಿಯೋಜಿತವಾಗಿರಬಾರದು. ಇನ್ನೊಬ್ಬರನ್ನು ಅಧೋಗತಿಗೆ ಎಳೆಯುವ ನಿರ್ಣಯಗಳು ನಮ್ಮ ವಿನಾಶಕ್ಕೆ ನಾಂದಿ ಆಗುತ್ತವೆ ಎಂಬುದು ಇದರ ತಾತ್ಪರ್ಯ.

**– ದೀಪಶ್ರೀ ಎಸ್ ಕೂಡ್ಲಿಗಿ, ಹವ್ಯಾಸಿ ಬರಹಗಾರ್ತಿ.**

# ಸಮರಸ ಜೀವನ



ಒಂದು ಪಾಕ ಅಥವಾ ಅಡುಗೆ ತಯಾರಾಗಬೇಕಾದರೆ ಅದಕ್ಕೆ ಸರಿಯಾದ ಪ್ರಮಾಣದಲ್ಲಿ ಹುಳಿ, ಉಪ್ಪು, ಖಾರ, ಸಿಹಿ, ಒಗರು, ಕಹಿ ಎಂಬ ಷಡ್ರಸಗಳು ಬಿದ್ದಾಗ ಮಾತ್ರ ಮಾಡಿದಂತಹ ಅಡುಗೆ ರುಚಿಯಾಗಿರಲು ಸಾಧ್ಯ. ಜೀವನದಲ್ಲಿಯೂ ಹಾಗೆಯೇ ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ ಎಂಬ ನವರಸಗಳಿವೆ. ಹೇಗೆ ಕೈಯಲ್ಲಿನ ಬೆರಳುಗಳೆಲ್ಲವೂ ಒಂದೇ ಅಳತೆಗಳಲ್ಲಿ ಇರುವುದಿಲ್ಲವೋ ಹಾಗೆಯೇ ಪ್ರಪಂಚದಲ್ಲಿನ ಜನರೆಲ್ಲರೂ ಒಂದೇ ತೆರನಾಗಿರುವುದಿಲ್ಲ. ಹೇಗೆ ನಾವು ಮಾಡಿದ ಅಡುಗೆಯಲ್ಲಿ ಷಡ್ರಸಗಳು ಸರಿಯಾದ ಪ್ರಮಾಣದಲ್ಲಿ ಬಿದ್ದಾಗ ಮಾತ್ರ ಮಾಡಿದ ಅಡುಗೆಯು ರುಚಿಸುವುದೋ ಹಾಗೆಯೇ ನವರಸ ಭಾವ ತುಂಬಿರುವ ಜನರ ಜೊತೆ ಹೊಂದಾಣಿಕೆ ಮಾಡಿಕೊಂಡು ಹೋದಲ್ಲಿ ಮಾತ್ರ ನಮ್ಮ ಜೀವನವು ಅಂದವಾಗಿರಲು ಸಾಧ್ಯ.

ಇದನ್ನೇ ದ.ರಾ ಬೇಂದ್ರೆಯವರು "ಸರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ" ಎಂದು ಹೇಳಿರುತ್ತಾರೆ ಎಂದರೆ ಜೀವನದಲ್ಲಿ ನಾವು ಎಂತ ಪರಿಸ್ಥಿತಿಯಲ್ಲಿಯೂ ಹೊಂದಿಕೊಂಡು ಹೋಗಬೇಕಾದುದು ಅವಶ್ಯಕ ಎಂದರ್ಥ. ಜೀವನದಲ್ಲಿ ಸುಖವೊಂದೇ ಬಯಸಿದರೆ ಸಿಗುವುದು ದುರ್ಲಭ ಹಾಗೆಯೇ ನೋವೊಂದೇ ಇಲ್ಲ ಜೀವನದಲ್ಲಿ. ನೋವು ನಲಿವುಗಳೆರಡೂ ಕೂಡಿದಾಗ ಮಾತ್ರ ಜೀವನ ಎಂದಾಗಲು ಸಾಧ್ಯ. ನೋವು, ನಲಿವಿನ ಈ ಬಾಳಬಂಡಿಯಲ್ಲಿ ಉಬ್ಬರವಿಳಿತಗಳು ಸಾಮಾನ್ಯ. ಈ ಉಬ್ಬರವಿಳಿತಗಳಲ್ಲಿ ನಮ್ಮನ್ನು ನಂಬಿದವರನ್ನು ಕೈ ಬಿಡದೇ, ಜಗಳ, ಕೋಪಗಳನ್ನು ಮಾಡದೇ, ದೇವರು ತೋರಿದ ಮಾರ್ಗದಲ್ಲಿ ನಡೆಯುವುದು ಅನಿವಾರ್ಯ. ಒಂದು ಕ್ಷಣದ ಕೋಪ, ಜಗಳ, ಮನಸ್ತಾಪಗಳಿಂದ "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ" ಎಂಬ ನಾಣ್ಣುಡಿಯಂತೆ ನಾವು ಅದೆಷ್ಟೋ ವರ್ಷಗಳ ಕಾಲ ಜೋಪಾನವಾಗಿ ಕಾಪಿಟ್ಟು ಕೊಂಡಿದ್ದ ಸುಂದರವಾದ ಸಂಬಂಧವು ನಾಶವಾಗಿಬಿಡುತ್ತದೆ. ಒಮ್ಮೆ ಮುರಿದ ಸಂಬಂಧ ವನ್ನು ಮರು ಜೋಡಿಸಲು ಬಲು ಕಷ್ಟಪಡಬೇಕಾಗುತ್ತದೆ. ಹೇಗೆ ಒಮ್ಮೆ ಒಡೆದ ಕನ್ನಡಿಯನ್ನು ಮರು ಜೋಡಿಸಲು ಅಸಾಧ್ಯವೋ ಹಾಗೆಯೇ ಕೆಲವು ಬಾರಿ ಒಮ್ಮೆ ಒಡೆದ ಸಂಬಂಧವನ್ನು ಮರು ಜೋಡಿಸಲು ಸಾಧ್ಯವಾಗುವುದಿಲ್ಲ.ಕೊನೆಗೆ ನಾವು ಅನೇಕ ರೀತಿಯಲ್ಲಿ ಕಷ್ಟ, ನೋವು ಅನುಭವಿಸಬೇಕಾಗುತ್ತದೆ ಹಾಗಾಗಿಯೇ ದ.ರಾ ಬೇಂದ್ರೆಯವರು ವಿರಸವೆಂದರೆ ಮರಣವೆಂದು ಹೇಳಿರುವುದು. ಹಾಗಾಗಿ ನಾವು ಯಾರ ಜೊತೆಯೂ ವಿರಸವನ್ನು ಇಟ್ಟುಕೊಳ್ಳದೆ, " ಕೂಡಿ ಬಾಳಿದರೆ ಸ್ವರ್ಗ ಸುಖ" ಎಂಬಂತೆ ವಿಭಿನ್ನ ವ್ಯಕ್ತಿತ್ವದ ಜನರ ಜೊತೆಗೆ ತಾಳ್ಮೆ, ಸಹನೆಯಿಂದ ಹೊಂದಿಕೊಂಡು ಬಾಳಬೇಕಾದುದು ಅನಿವಾರ್ಯವೂ ಹೌದು, ಇದೇ ಜೀವನ, ಇದರಲ್ಲೇ ಇರುವುದು ಖುಷಿಯ ಬಾಳು ಅಲ್ಲವೇ?



**– ಪ್ರಜ್ಞಾ ರವೀಶ್ ಕುಳಮರ್ವ, ಕಾಸರಗೋಡು.**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ರಥಸಪ್ತಮಿಯ ಪುಣ್ಯಕಾಲ

ಇದು ಉತ್ತರಾಯಣದ
ರಥಸಪ್ತಮಿಯ ಪುಣ್ಯಕಾಲ.
ಸೂರ್ಯದೇವನು ಹೊಸ,
ರಥ ತುರಗವೇರಿ ಬರುವ ಕಾಲ.

ತನ್ನ ಪ್ರಖರ ಕಿರಣಗಳಿಂದ,
ಜಗದ ತಮವ ಕಳೆವ ಕಾಲ,
ಚಳಿ ಮಡುಗಟ್ಟಿದ ಭುವಿಯಲ್ಲಿ,
ಮರಳುವುದು ವಸಂತ ಕಾಲ.

ಮುಂಜಾನೆ ಚುಮುಚುಮು ಚಳಿ
ಎಲ್ಲೆಲ್ಲೂ ಬಣ್ಣದ ಹೂವುಗಳರಳಿ,
ಭೂದೇವಿಗೆ ಮಾಡಿದೆ ಸಿಂಗಾರ ನೋಡಿ,
ಹಕ್ಕಿಗಳು ಹಾರಾಡಿವೆ ಸಂತಸದಿ ಹಾಡಿ,

ಆರೋಗ್ಯ ಪ್ರದಾತನು ಇವನು,
ಲೋಕಕ್ಕೆ ಶಕ್ತಿ ಸಂಚಯಿಸುವವನು,
ಇನನಿಂದಲೇ ಇರುಳು ಬೆಳಗಾಗುವುದು
ಸೃಷ್ಟಿಯೊಳು ಚೈತನ್ಯ ಮೂಡುವುದು

– ಮಮತಾ ಶೃಂಗೇರಿ

## ಹಂಪಸಾಗರದಲ್ಲಿ ಪ್ರಾಂಚೈಸಿಗಳ ನೇಮಕಕ್ಕೆ ಅರ್ಜಿ ಅಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ
ಹಗರಿಬೊಮ್ಮನಹಳ್ಳಿ ತಾಲೂಕಿನ ಹಂಪಸಾಗರ ಗ್ರಾಪಂ ವ್ಯಾಪ್ತಿಯ ಗ್ರಾಮ ಒನ್ ಕೇಂದ್ರಕ್ಕೆ ಅಭ್ಯರ್ಥಿಗಳನ್ನು ನೇಮಕ ಮಾಡಲು ಅರ್ಜಿ ಅಹ್ವಾನಿಸಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ತಿಳಿಸಿದ್ದಾರೆ.
ಹಂಪಸಾಗತ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಒನ್ ಪ್ರಾಂಚೈಸಿಗಳನ್ನು ನೇಮಕ ಮಾಡಲು ಮೆ.ಬಿಎಲ್‌ಎಸ್ ಇಂಟರ್‌ನ್ಯಾಷನಲ್ ಸರ್ವಿಸಸ್ ಲಿಮಿಟೆಡ್ ಬೆಂಗಳೂರು ಇವರಿಗೆ ಫೆ.01 ರಿಂದ 15 ದಿನಗಳವರೆಗೆ ನಿಯಮಾನುಸಾರ ಅರ್ಜಿ ಅಹ್ವಾನಿಸಿದ್ದು, ಅಭ್ಯರ್ಥಿಗಳು https://kal-mys-gramone.karnataka.gov.in/index.php/ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದ್ದಾರೆ.



### ತುಂಗಭದ್ರಾ ನೀರಿನ ಮಟ್ಟ

ಬುಧವಾರ : 05–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1615.52 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 6961 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 49.664 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1588.17 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 271 ಕ್ಯುಸೆಕ್ |
| ಸಾಮರ್ಥ್ಯ | 9.570 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

06–02–2025 – ಗುರುವಾರ

| | |
|---|---|
| ತಿಥಿ | : ನವಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಕೃತಿಕಾ |
| ಯೋಗ | : ಬ್ರಹ್ಮ |
| ಕರಣ | : ಬಾಳವ |
| ಸೂರ್ಯೋದಯ | : 07:05:49 |
| ಸೂರ್ಯಾಸ್ತ | : 18:16:28 |
| ರಾಹು ಕಾಲ | : 14:05–15:29 |
| ಯಮಘಂಡ ಕಾಲ | : 07:06–08:30 |
| ಗುಳಿಕ ಕಾಲ | : 09:53–11:17 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ಪ್ರಗತಿ ಪರಿಶೀಲನಾ ಸಭೆ । ಹರಪನಹಳ್ಳಿ ತಾಪಂ ಇಒ ಅಪೂರ್ವ ಎ ಕುಲಕರ್ಣಿ ಅಧಿಕಾರಿಗಳಿಗೆ ಖಡಕ್ ಸೂಚನೆ

# ಶಾಸಕರ ನಿರೀಕ್ಷೆಯಂತೆ ಅಭಿವೃದ್ಧಿಗೆ ಶ್ರಮಿಸಿ

## ದೂರುಗಳು ಬಂದ್ರೆ ಕ್ರಿಮಿನಲ್ ಕೇಸ್ ದಾಖಲು । ಪಿಡಿಒ, ಕಾರ್ಯದರ್ಶಿಗಳಿಗೆ ಎಚ್ಚರಿಕೆ




ಹಂಪಿ ಟೈಮ್ಸ್ ಹರಪನಹಳ್ಳಿ
ಶಾಸಕರ ನಿರೀಕ್ಷೆ ಹಾಗೂ ಅವರ ಗುರಿಯಂತೆ ಎಲ್ಲರೂ ಕೆಲಸ ನಿರ್ವಹಿಸಬೇಕು. ಯಾರಾದರೂ ಬೇಜವಾಬ್ದಾರಿ ತೋರಿದರೆ ಇದುವರೆಗೆ ಬರೀ ನೋಟಿಸ್ ನೀಡಿದ್ದು ಆಯ್ತು. ಇನ್ಮುಂದೆ 1–4 ಜಾರಿ ಮಾಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಅಪೂರ್ವ ಎ ಕುಲಕರ್ಣಿ ಖಡಕ್ ಎಚ್ಚರಿಕೆ ನೀಡಿದರು.

ತಾಲೂಕು ಪಂಚಾಯಿತಿಯ ರಾಜೀವ ಗಾಂಧಿ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಕೆಲ ಕೂಸಿನ ಮನೆಗಳು ಉತ್ತಮವಾಗಿ ನಡೆಯುತ್ತಿದ್ದರೂ ಆರೈಕೆದಾರರಿಗೆ ನರೇಗಾದಡಿ ಕೂಲಿ ಹಣ ಪಾವತಿ ಮಾಡುತ್ತಿಲ್ಲ. ಇನ್ನು ಕೆಲ ಗ್ರಾಮ ಪಂಚಾಯಿತಿಗಳಲ್ಲಿ ಕೂಸಿನ ಮನೆ ನಡೆಯದೇ ಇದ್ದರೂ ಕೂಲಿ ಹಣ ಪಾವತಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಖಂಡಿತ ಕ್ರಮಕೈಗೊಳ್ಳಲಾಗುವುದು. ಪ್ರತೀ ಕೂಸಿನ ಮನೆಯಲ್ಲಿ ಪೌಷ್ಟಿಕ ಆಹಾರ, ಸ್ವಚ್ಛತೆ, ಫ್ಯಾನ್ ಸೇರಿದಂತೆ ಎಲ್ಲ ಕೂಸಿನಮನೆಗಳಲ್ಲಿ ಮೂಲ ಸೌಲಭ್ಯ ಖಂಡಿತವಾಗಿ ಒದಗಿಸಬೇಕು. ಯಾವಾಗ ಬೇಕಾದರೂ ನಾವು ಭೇಟಿ ನೀಡಬಹುದು. ಇದರಲ್ಲಿ ಲೋಪ ಕಂಡು ಬಂದಲ್ಲಿ ಪಿಡಿಒ ವಿರುದ್ಧವೇ ನೇರವಾಗಿ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನರೇಗಾ ಸಹಾಯಕ ನಿರ್ದೇಶಕ ಯು. ಎಚ್.ಸೋಮಶೇಖರ್ ನರೇಗಾ ಕುರಿತು ಮಾತನಾಡಿ, ಇದುವರೆಗೆ ನಿಗದಿತ ಮಾನವ ದಿನಗಳ ಸೃಜನೆಯಲ್ಲಿ ಶೇ.84 ಕ್ಕೂ ಅಧಿಕ ಸಾಧನೆ ಮಾಡಲಾಗಿದೆ ಎಂದರು.

ಸಾಧನೆಯಾಗಿದ್ದರೆ, ಸ್ಮಶಾನಗಳ ಪ್ರಗತಿ ಮಾತ್ರ ಕುಂಠಿತ ವಾಗಿರುವುದೇಕೆ ಎಂದು ಇಒ ಪ್ರಶ್ನಿಸಿದರು.

ಅಧಿಕಾರಿ ಪ್ರತಿಕ್ರಿಯಿಸಿ ವರದಿ ಒಪ್ಪಿಸಿದರು.

ಇನ್ನು ಜಲ ಜೀವನ್ ಮಿಷನ್ ಯೋಜನೆಯಲ್ಲಿ ಒಎಚ್‌ಟಿಗಳ ಸ್ವಚ್ಛತೆ, ನೀರಿನ ಕ್ಲೋರಿನೇಷನ್, ಶುದ್ಧ ಕುಡಿಯುವ ನೀರು, ಪೈಪ್‌ಲೈನ್, ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಿಸಿ ಕೊಂಡ ಫಲಾನುಭವಿಗಳಿಗೆ ಹಣ ಜಮೆ ಕುರಿತು ಮಾಹಿತಿ ಪಡೆದು ಆದಷ್ಟು ಶೀಘ್ರ ಪ್ರಗತಿ ಸಾಧಿಸಲು ಸೂಚಿಸಿದರು. ವಸತಿ ಯೋಜನೆ, ಪಂಚಾಯತ್ ರಾಜ್ ವಿಷಯಗಳಾದ ಬಯೋಮೆಟ್ರಿಕ್ ಹಾಜರಾತಿ, ಸಕಾಲ, ಐಪಿಜಿಆರ್‌ಎಸ್ ಪರಿಹಾರ ಅರ್ಜಿಗಳ ವಿಲೇವಾರಿ, ತೆರಿಗೆ ವಸೂಲಾತಿ ಸೇರಿ ವಿವಿಧ ವಿಷಯಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ನರೇಗಾ ಸಹಾಯಕ ನಿರ್ದೇಶಕ ಚಂದ್ರಶೇಖರ್ ವೈ.ಎಚ್., ಪಂಚಾಯತ್ ಸಹಾಯಕ ನಿರ್ದೇಶಕ ವೀರಣ್ಣ ಲಕ್ಕಣ್ಣನವರ್, ತಾಲೂಕು ಯೋಜನಾಧಿಕಾರಿ ನವೀನ್ ಕುಮಾರ್, ತಾಂತ್ರಿಕ ಸಂಯೋಜಕ ನಾಗರಾಜ ನಾಯ್ಕ, ಐಇಸಿ ಸಂಯೋಜಕ ವಸಿಗೇರಪ್ಪ, ಎಂಐಎಸ್ ಸಂಯೋಜಕ ಮೈಲಾರಿಗೌಡ ಎಲ್ಲ ಗ್ರಾಪಂಗಳ ಪಿಡಿಒಗಳು, ಕಾರ್ಯದರ್ಶಿಗಳು, ಎಸ್‌ಡಿಎಎಗಳು, ತಾಂತ್ರಿಕ ಸಹಾಯಕ ಅಭಿಯಂತರರು ಸೇರಿದಂತೆ ತಾಪಂ ಹಾಗೂ ಗ್ರಾಪಂ ಸಿಬ್ಬಂದಿ ಇದ್ದರು.

**ಕ್ರಿಮಿನಲ್ ಕೇಸ್ ದಾಖಲಿಸಬಹುದು ನೆನಪಿರಲಿ**
ನರೇಗಾ ಯೋಜನೆಯಡಿ ಆರಂಭಿಸಿದ ಕೂಸಿನ ಮನೆಗಳ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಕೆಲಸ ಮಾಡಬೇಕು. 6 ತಿಂಗಳಿಂದ 3 ವರ್ಷದೊಳಗಿನ ಮಕ್ಕಳಿಗೆ ಎಲ್ಲ ಸೌಲಭ್ಯ ಒದಗಿಸಬೇಕು, ಇಲ್ಲದೇ ಹೋದಲಿ ಈ ಬಗ್ಗೆ ಏನಾದರೂ ದೂರುಗಳು ಬಂದರೇ ಕ್ರಿಮಿನಲ್ ಕೇಸ್ ದಾಖಲಿಸಲು ನರೇಗಾದಡಿ ಅವಕಾಶ ಇದೆ ಎಂದು ಇಒ ಅಪೂರ್ವ ಅವರು ಪಿಡಿಒ ಹಾಗೂ ಕಾರ್ಯದರ್ಶಿಗಳಿಗೆ ಎಚ್ಚರಿಸಿದರು.



ಬರೀ ಮನೆಮನೆಗೆ ಹೋದ್ರೆ ಸಾಲಲ್ಲ. ಅಗತ್ಯವಿರುವೆಡೆ ಕರ ವಸೂಲಿ ಕಾರರನ್ನು ನೇಮಿಸಿ ತೆರಿಗೆ ವಸೂಲಿಗೆ ಪಿಡಿಒಗಳು ಕ್ರಮ ಕೈಗೊಳ್ಳಬೇಕು. ವಿಂಡ್ ಫ್ಯಾನ್, ಟವರ್, ಅಂಗಡಿ, ಹೋಟೆಲ್, ಬೇಕರಿ ಸೇರಿದಂತೆ ಹೆಚ್ಚು ತೆರಿಗೆಗೆ ಒಳಪಡುವ ವಾಣಿಜ್ಯ ಮಳಿಗೆಗಳ ಬಾಕಿ ತೆರಿಗೆಯನ್ನು ಮೊದಲು ವಸೂಲಿ ಮಾಡಬೇಕು.
– ಅಪೂರ್ವ ಎ ಕುಲಕರ್ಣಿ
ಇಒ ತಾಪಂ ಹರಪನಹಳ್ಳಿ

# ಖಗೋಳ ವೀಕ್ಷಣೆ



ಹಂಪಿ ಟೈಮ್ಸ್ ಕೂಡ್ಲಿಗಿ
ದೂರದರ್ಶಕಗಳ ಆವಿಷ್ಕಾರದ ನಂತರ ಬಾಹ್ಯಾಕಾಶ ಕ್ಷೇತ್ರದಲ್ಲಿ ಅನೇಕ ಸಂಶೋಧನೆಗಳನ್ನು ಕೈಗೊಳ್ಳಲು ಖಗೋಳ ವಿಜ್ಞಾನಿಗಳಿಗೆ ಅನುಕೂಲವಾಯಿತೆಂದು ಹವ್ಯಾಸಿ ಖಗೋಳ ವೀಕ್ಷಕರು ಹಾಗೂ ಚಿತ್ರದುರ್ಗ ವಿಜ್ಞಾನ ಸಮಿತಿ ಕಾರ್ಯದರ್ಶಿ ಎಚ್.ಎಸ್.ಟಿ.ಸ್ವಾಮಿ ತಿಳಿಸಿದರು.
ಪಟ್ಟಣದ ಗಾಂಧೀಜಿ ಚಿತಾಭಸ್ಮವಿರುವ ಹುತಾತ್ಮರ ಸ್ಮಾರಕದಲ್ಲಿ ಮಂಗಳವಾರ ಚಿಂತನಚೇತನ ಸರಣಿ ಕಾರ್ಯಕ್ರಮದಲ್ಲಿ ಏರ್ಪಡಿಸಿದ್ದ ಬೃಹತ್ ದೂರದರ್ಶಕದ ಮೂಲಕ ಬಾಹ್ಯಾಕಾಶವನ್ನು ವಿದ್ಯಾರ್ಥಿಗಳಿಗೆ ತೋರಿಸುವ ಮೂಲಕ ಖಗೋಳದ ಬಗ್ಗೆ ವಿವರಿಸಿದ ಅವರು, ಖಗೋಳ ವಿಜ್ಞಾನ ತುಂಬಾ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಕ್ರಿ.ಶ. 1610 ರಲ್ಲಿ ಗೆಲಿಲಿಯೋ ದೂರದರ್ಶಕವನ್ನು ತಯಾರಿಸಿ ಜಗತ್ತೆ ಬೆರಗಾಗುವಂತೆ ಮಾಡಿದ್ದಾನೆ. ಈಗ ಸಂಶೋಧನೆಗಳಿಗೆ ನೆರವಾಗಲು ಹೆಚ್ಚು ಸಾಮರ್ಥ್ಯವನ್ನು ದೂರದರ್ಶಕಗಳು ಮಾರುಕಟ್ಟೆಯಲ್ಲಿ ಬಳಕೆಗೆ ಸಿಗುತ್ತಿವೆ. ಅವುಗಳ ಮೂಲಕ ಕೋಟಿ ಕೋಟಿ ಕಿ.ಮೀ. ದೂರದಲ್ಲಿರುವ ಆಕಾಶಕಾಯಗಳನ್ನು ತುಂಬಾ ಹತ್ತಿರದಿಂದ ವೀಕ್ಷಿಸಬಹುದಾಗಿದೆ. ಗ್ರಹಗಳು, ಉಪಗ್ರಹಗಳು, ಧೂಮಕೇತುಗಳು, ನೆಬುಲಾಗಳು, ಗ್ಯಾಲಕ್ಸಿಗಳನ್ನು ನೋಡಿ ಆನಂದಿಸಬಹುದಾಗಿದೆ ಎಂದು ಮಕ್ಕಳಲ್ಲಿ ಕುತೂಹಲ ಮೂಡಿಸಿದ ಅವರು, ದೂಮಕೇತುಗಳು, ಗ್ರಹಗಳು ಅಪಶಕುನದ ಸಂಕೇತಗಳಲ್ಲ. ವಿದ್ಯಾವಂತರು ಸಹ ಇಂತವುಗಳನ್ನು ನಂಬುತ್ತಿರುವುದು ವಿಪರ್ಯಾಸವಾಗಿದೆ. ವಿಜ್ಞಾನ ಯಾವಾಗಲು ಸತ್ಯವನ್ನೇ ಹೇಳುತ್ತದೆ ಎಂದರು.
ಗ್ರೇಡ್–2 ತಹಶೀಲ್ದರ್ ವಿ.ಕೆ. ನೇತ್ರಾವತಿ ದೂರದರ್ಶಕದ ಮೂಲಕ ಚಂದ್ರನನ್ನು ವೀಕ್ಷಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
ಜೆಸಿಐ ಅಧ್ಯಕ್ಷ ಶ್ರೀಧರ ರಾಯ್ಕರ್, ನಾಗರಾಜ ಕೊಟ್ರಪ್ಪಗಳ, ಸಂದೀಪ್ ರಾಯಸಂ, ಜಿಲಾನ್, ಕೋಟ್ರೇಶ್, ಐಲಿ ರವಿಕುಮಾರ್, ಪ್ರಾಚಾರ್ಯೆ ಟಿ. ಕೊತ್ಲಮ್ಮ, ಕಸಾಪ ಅಧ್ಯಕ್ಷ ವೀರೇಶ್ ಅಂಗಡಿ, ಪಟ್ಟಣ ಶೆಟ್ರು ಪಂಪಣ್ಣ, ಹಿರೇಕುಂಬಳಗುಂಟೆ ಉಮೇಶ ಭಾಗಿಯಾಗಿದ್ದರು.

# ಶಿಕ್ಷಣದಿಂದ ಸಮಾಜದ ಉನ್ನತಿ

## ಖಾಟಿಕ್ ಸಮಾಜದ ಅಧ್ಯಕ್ಷ ದೇವಾನಂದ ಕಲಾಲ್ ಹೇಳಿಕೆ

### ಕ್ಷತ್ರೀಯ ಖಾಟಿಕ್ ಸಮಾಜದಿಂದ ರಥಸಪ್ತಮಿ ಆಚರಣೆ



ಹಂಪಿ ಟೈಮ್ಸ್ ಹೊಸಪೇಟೆ
ಸೂರ್ಯನಾರಾಯಣ ಜಯಂತಿಯು ಸೂರ್ಯವಂಶ ಕ್ಷತ್ರೀಯ ಖಾಟಿಕ್ ಸಮಾಜ ಸೂರ್ಯದೇವನನ್ನು ಪೂಜಿಸುವ ಧಾರ್ಮಿಕ ಹಬ್ಬವಾಗಿದ್ದು, ಆಧ್ಯಾತ್ಮಿಕ, ಸಾಂಸ್ಕೃತಿಕ ಸಾಮರಸ್ಯದ ಸಂಕೇತವಾಗಿದೆ ಎಂದು ಖಾಟಿಕ್ ಸಮಾಜದ ಅಧ್ಯಕ್ಷ ದೇವಾನಂದ ಕಲಾಲ್ ಹೇಳಿದರು.
ನಗರದ ಎಂಪಿ ಪ್ರಕಾಶ್ ನಗರದ ಬಳಿ ಸಾಯಿ ಕಾಲೋನಿಯಲ್ಲಿರುವ ಸಮಾಜದ ಭವನದಲ್ಲಿ ಮಂಗಳವಾರ ಜರುಗಿದ 7ನೇ ವರ್ಷದ ಸೂರ್ಯನಾರಾಯಣ ಜಯಂತಿಯಲ್ಲಿ ಮಾತನಾಡಿದರು. ರಥಸಪ್ತಮಿ ಆಚರಣೆಯು ಯುವ ಪೀಳಿಗೆಗೆ ಸಮಾಜದ ಪರಂಪರೆ ಸಂಸ್ಕೃತಿ ಹಾಗೂ ಸೂರ್ಯನಾರಾಯಣನ ಧಾರ್ಮಿಕ ಮಹತ್ವವನ್ನು ತಿಳಿಯಪಡಿಸುತ್ತದೆ. ಸಮುದಾಯ ಸಂಘಟಿತರಾಗಲು ಆಚರಣೆಗಳು ಸಹಕಾರಿಯಾಗಿವೆ. ಯುವಕರು ಶೈಕ್ಷಣಿಕವಾಗಿ ಪ್ರಗತಿ ಹೊಂದಿ ಸಮಾಜದ ಉನ್ನತಿಗೆ ಶ್ರಮಿಸಬೇಕು ಎಂದರು.
ನಗರದ ರಾಣಿಪೇಟೆಯಿಂದ ಶ್ರೀಭಗವಾನ್ ಸೂರ್ಯನಾರಾಯಣ ಭಾವಚಿತ್ರವನ್ನು ಮೆರವಣಿಗೆ ನೂರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಮೂಲಕ ಭವನಕ್ಕೆ ಸಂಭ್ರಮದೊಂದಿಗೆ ತೆರಳಿದರು.
ಬಿ ಶ್ರೀನಿವಾಸ್ ಅವರು ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಾಗಿ ಹಿಂದುಳಿದ ವರ್ಗಗಳ ಇಲಾಖೆ ವಿಜಯನಗರ ಜಿಲ್ಲಾ ಪತ್ರಾಂಕಿತ ವ್ಯವಸ್ಥಾಪಕಿ ಶಶಿಕಲಾ, ಸಮಾಜದ ಗೌರವಾಧ್ಯಕ್ಷ ಗೋಪಾಲ್ ರಾವ್ ಉಪಾಧ್ಯಕ್ಷ ನಾಗೇಶ್ ಕಲ್ಯಾಣಕರ್, ಮುಖಂಡರಾದ ಗೋವಿಂದಪ್ಪ ಕನ್ಯಾಕರ್ ತಾಯಪ್ಪ ಕಲಾಲ್, ಯುವಕ ಸಂಘದ ಅಧ್ಯಕ್ಷ ನರೇಶ್ ಬಾಬು, ಆನಂದ್ಕರ್, ಅವಿನಾಶ್ ಕಲಾಲ್, ಪರಶುರಾಮ ಕಲಾಲ್ ಇತರರು ಇದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

## ಸಿರುಗುಪ್ಪ ಪಟ್ಟಣದ ಎಪಿಎಂಸಿ ಆವರಣದಲ್ಲಿ

# ಫೆ.20 ಅಕ್ಕಿ ಬಹಿರಂಗ ಹರಾಜು

## ಫೆ.17 ನೋಂದಾಯಿಸಿಕೊಳ್ಳಲು ಕೊನೆಯ ದಿನ

ಹಂಪಿ ಟೈಮ್ಸ್ ಸಿರುಗುಪ್ಪ
ಸಿರುಗುಪ್ಪ ತಾಲ್ಲೂಕಿನ ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳ ಜಂಟಿ ತಂಡವು ಒಟ್ಟು 26 ವಿವಿಧ ಪ್ರಕರಣಗಳಲ್ಲಿ ಅಕ್ರಮ ಪಡಿತರ ದಾಸ್ತಾನು ಹಾಗೂ ಅಕ್ರಮ ಪಡಿತರ ಧಾನ್ಯ ಸಾಗಾಣಿಕೆ/ದಾಸ್ತಾನನ್ನು ಜಪ್ತು ಮಾಡಿದ ಒಟ್ಟು 701.95 ಕ್ವಿಂಟಾಲ್ ಅಕ್ಕಿಯನ್ನು ಸಿರುಗುಪ್ಪ ಪಟ್ಟಣದ ಎಪಿಎಂಸಿ ಆವರಣದ ಕೆಎಫ್‌ಸಿಎಸ್‌ಸಿ ಸಗಟು ಗೋದಾಮಿನಲ್ಲಿ ಫೆ.20 ರಂದು ವಿವಿಧ ಷರತ್ತಿಗೊಳಪಟ್ಟು ಬಹಿರಂಗ ಹರಾಜು ಮಾಡಲಾಗುವುದು ಎಂದು ಸಿರುಗುಪ್ಪ ತಹಶೀಲ್ದಾರರು ತಿಳಿಸಿದ್ದಾರೆ.
ಭದ್ರತಾ ಠೇವಣಿ ನೀಡಿ ನೋಂದಾಯಿಸಿಕೊಂಡವರಿಗೆ ಮಾತ್ರ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಇರುತ್ತದೆ. ಆಸಕ್ತಿಯುಳ್ಳ ಬಿಡ್‌ದಾರರು ರೂ.1,50,000/–ಗಳನ್ನು ತಹಶೀಲ್ದಾರರು, ಸಿರುಗುಪ್ಪ ಇವರ ಹೆಸರಲ್ಲಿ ಮುಂಗಡ ಭದ್ರತಾ ಠೇವಣಿ ತೆಗೆದುಕೊಂಡು ಸಿರುಗುಪ್ಪ ಆಹಾರ ನಿರೀಕ್ಷಕರಾದ ಮಹಾರುದ್ರ ಗೌಡ (ಮೊ.9986415163) ಹಾಗೂ ವಿಜಯ ಕುಮಾರ್(ಮೊ.9449738127) ಇವರ ಬಳಿ ನೋಂದಾಯಿಸಿ ಕೊಂಡು ಸ್ವೀಕೃತಿ ಪಡೆದುಕೊಳ್ಳಬೇಕು.
ಫೆ.17 ಸಂಜೆ 05.00 ರೊಳಗೆ ನೋಂದಾಯಿಸಿಕೊಳ್ಳಲು ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಸಿರುಗುಪ್ಪ ತಾಲೂಕು ಕಚೇರಿ (ಆಹಾರ ಶಾಖೆ)ಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI
ಪರೀಕ್ಷೆಗೆ ನಾವು ಸಿದ್ಧ 43 ದಿನ
ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು
https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲಿಷ್

### COLLACATIONS

Definition: words often used together are called collocations. For example, the word 'hearty' used with 'congratulations' and we say 'Hearty congratulations. In the following table, match the words that collocate and write them in given space.

**Combine the word in Column - A with with Column - B:**

| 'A' | | 'B' |
|---|---|---|
| 1) Self | : | [authority, willing, discipline, nature] |
| 2) Short | : | [temple, table, temper, area ] |
| 3) Rapid | : | [age, growth, life, fast] |
| 4) Book | : | [care, teacher, bank, pain ] |
| 5) Brisk | : | [jump, run, walk, talk ] |
| 6) Credit | : | [insurance, order, card, coin ] |
| 7 Glance | : | [soon, late, quick, early] |
| 8) Joint | : | [damage, account, commerce, holiday] |
| 9) March | : | [first, long, past, last] |
| 10) Fast | : | [table, food, water, breakfast] |
| 11) Scare | : | [pigeon, crow, peacock, eagle) |
| 12) Strange | : | [look, like, lock, lord] |
| 13) Iron | : | [steel, curtain, land, book] |
| 14) Rustling | : | [fruits, leaves, waves, vegetables! |
| 15) Strong | : | [water, milk, coffee, honey ] |
| 16) Rapid | : | [growth, progress, movement, speed ] |
| 17) Land | : | [quake, house, lord, rain ] |
| 18) Lay | : | [ attention, emphasis, notice, order] |
| 19) Wavy | : | [ girl, hair, lady, story] |
| 20) Catch | : | [ball, food, book, fire] |

### INFINITIVES

An infinitive is a verb form that is the same as the base or dictionary form of a verb. It is often preceded by the word "to", for example, "to study" or "to run". Infinitives can be used as nouns, adjectives, or adverbs, and can function as subjects, direct objects, subject complements, adjectives, or adverbs in a sentence.

**Examples**
- The children need a garden to play in.
- I would like a sandwich to eat.
- I don't have anything to wear.
- Would you like something to drink?

The verb which takes to show the infinity of the action is called infinitive verb. An infinitive is a verb form that takes a 'to' before the base verb.
( Clue : to + V1)

**Examples :**

**1, I am going to the market to buy vegetables.**
A) going B) are C) to buy D) am .

**2). I am going to medical store to bring medicines.**
A) going B) am C) going to D) to bring.

**3. Hi Arati, will you come with me to the market ? I want to buy vegetables.**
A) take B) come C) to buy D) go.

**4. I have a guest to night. Prepare something good. But don't forget to make some sweets.**
A) have B) prepare C) forget D ) to make

**Practice :**
Read the following statement/conversation and choose the infinitive.

**1) It is a pleasure to meet a cheerful person.**
a) is b) pleasure c) to meet d) person

**2) I am going to market tomorrow with my father to buy dresses for my birthday.**
a) To buy b) to market c) going d) play

**3) Mahesh was watching cricket match on TV. Suddenly he heard a noise from outside. He went outside to see what had happened.**
(A) was (B) went (C) to see (D) heard.

**4) Good afternoon. I'd like to buy some books on national leaders.**
(A) do (B) to buy (C) can (D) like.

**5) The facility lacked personnel and equipment. The on duty physician was not able to do more than giving first aid. He advised that she be moved to a nearby hospital.**
(A) was (B) to do (C) advised (D) lacked.

**Practice Makes Man Perfect**

www.hampitimes.com - Hampi Times Margadarshi

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Greetings
Ads Starts
from Rs.1000
94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

**ಮೈಕ್ರೋ ನ್ಯೂಸ್**

## ಸ್ವ-ಸಹಾಯ ಸಂಘಗಳಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕಂಪ್ಲಿ**

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿನ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿಗಾಗಿ ಡೇ–ನಲ್ಮ್ ಅಭಿಯಾನದಡಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ರಚಿತವಾದ ಅರ್ಹ ಮಹಿಳಾ ಸ್ವಸಹಾಯ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ದುರುಗಣ್ಣ ಅವರು ತಿಳಿಸಿದ್ದಾರೆ.

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಬಹು ದಿನಗಳಿಂದ ಬಾಕಿ ಇರುವ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಾತಿ ಸಂಗ್ರಹಣೆ ಮಾಡಲು ತೊಡಗಿಸಿಕೊಳ್ಳಲಾಗುವುದು.

ಆಸಕ್ತ ಮಹಿಳಾ ಸ್ವಸಹಾಯ ಸಂಘಗಳು ಕಂಪ್ಲಿ ಪುರಸಭೆ ಕಾರ್ಯಾಲಯಕ್ಕೆ ಭೇಟಿ ನೀಡಿ ಅರ್ಜಿ ನಮೂನೆ ಪಡೆದುಕೊಂಡು, ಫೆ.07 ರೊಳಗಾಗಿ ಮುಚ್ಚಿದ ಲಕೋಟೆಯಲ್ಲಿ ಪ್ರಸ್ತಾವನೆ ಸಲ್ಲಿಸಬೇಕು.

ಅರ್ಹತೆ: ಸ್ವಸಹಾಯ ಸಂಘವು ಡೇ–ನಲ್ಮ್ ಅಭಿಯಾನದಡಿ ನೋಂದಾಯಿಸಿರಬೇಕು (ಎಂಐಎಸ್ ಕೋಡ್ ಹೊಂದಿರಬೇಕು) ಹಾಗೂ ಪಂಚಸೂತ್ರಗಳನ್ನು ಅನುಸರಿಸುತ್ತಿರಬೇಕು. ಆಸಕ್ತ ಸ್ವಸಹಾಯ ಸಂಘದ ಸದಸ್ಯರು ಕನಿಷ್ಠ 7ನೇ ತರಗತಿಯವರೆಗೆ ಶಿಕ್ಷಣವನ್ನು ಹಾಗೂ ಎಲೆಕ್ಟ್ರಾನಿಕ್ ಪರಿಕರಗಳನ್ನು ಬಳಸುವ ಸಾಮರ್ಥ್ಯ ಹೊಂದಿರಬೇಕು. ಸ್ವಸಹಾಯ ಸಂಘದ ಹೆಸರಿನಲ್ಲಿ ಸಕ್ರಿಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಸ್ವಸಹಾಯ ಗುಂಪು ರಚನೆಯಾಗಿ ಕನಿಷ್ಠ 3 ವರ್ಷ ಪೂರೈಸಿರಬೇಕು. ಬ್ಯಾಂಕಿನ ಮೂಲಕ ಅಥವಾ ಆಂತರಿಕ ಸಾಲ ಪಡೆದು ನಿಯಮಿತವಾಗಿ ಸಾಲ ಮರು ಪಾವತಿ ಮಾಡಿರಬೇಕು. ಹೆಚ್ಚಿನ ಮಾಹಿತಿಗಾಗಿ ಕಂಪ್ಲಿ ಪುರಸಭೆ ಕಾರ್ಯಾಲಯಕ್ಕೆ ಭೇಟಿ ನೀಡಿ ಸಂಪರ್ಕಿಸ ಬಹುದು ಎಂದು ಪ್ರಕಟಣೆ ತಿಳಿಸಿದೆ.

## ವಿಧಾನಸೌಧ ಆವರಣದಲ್ಲಿ ಪುಸ್ತಕ ಮೇಳ, ಮಾರಾಟಗಾರರಿಂದ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ವಿಧಾನ ಸಭೆ ಸಚಿವಾಲಯದಿಂದ ಪ್ರಥಮ ಬಾರಿಗೆ ನಾಡಿನ ಜನತೆಗೆ ಅತೀ ಅಮೂಲ್ಯವಾದ ಪುಸ್ತಕಗಳನ್ನು ವೀಕ್ಷಿಸಲು ಮತ್ತು ಖರೀದಿಸಲು ಕರ್ನಾಟಕ ವಿಧಾನ ಸಭಾ ಸಚಿವಾಲಯದ ವತಿಯಿಂದ ಫೆಬ್ರವರಿ 27 ರಿಂದ ಮಾರ್ಚ್ 3 ರ ವರೆಗೆ ವಿಧಾನಸೌಧದ ಆವರಣದಲ್ಲಿ ಪುಸ್ತಕ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

ಈ ಪುಸ್ತಕ ಮೇಳದಲ್ಲಿ ಭಾಗವಹಿಸಲು ಇಚ್ಛಿಸುವ ನಾಡಿನ ಪ್ರಕಾಶಕರು / ಮಾರಾಟಗರಾರು ನಿಗದಿತ ಅರ್ಜಿ ನಮೂನೆಯನ್ನು ಮುಖ್ಯ ಗ್ರಂಥಪಾಲಕರು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು, ಇವರಿಂದ ಅಥವಾ ವಿಧಾನ ಸಭೆ ಸಚಿವಾಲಯದ ವೆಬ್ ಸೈಟ್ www.kla.kar.nic.in ನಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದಾಗಿದೆ.

ಮೇಳದಲ್ಲಿ ಭಾಗವಹಿಸುವ ಪ್ರಕಾಶಕರು/ ಮಾರಾಟಗಾರರು ಮಳಿಗೆಯೊಂದಕ್ಕೆ ರೂ. 1,000/– ಗಳ ಭದ್ರತಾ ಠೇವಣಿ ಡಿ.ಡಿ ಯನ್ನು ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು ಇವರ ಹೆಸರಿನಲ್ಲಿ ಸಲ್ಲಿಸುವುದು.

ಭರ್ತಿ ಮಾಡಿದ ಅರ್ಜಿಯನ್ನು ಡಿ.ಡಿ.ಯೊಂದಿಗೆ 2025 ನೇ ಫೆಬ್ರವರಿ 12 ರಂದು ಸಂಜೆ 5.00 ಗಂಟೆಯೊಳಗೆ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು ಇವರಿಗೆ ಸಲ್ಲಿಸಬಹುದು ಎಂದು ಕರ್ನಾಟಕ ವಿಧಾನಸಭೆಯ ಕಾರ್ಯದರ್ಶಿಗಳಾದ ಎಂ. ಕೆ.ವಿಶಾಲಾಕ್ಷಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಭೂಮಿಪೂಜೆ

## 76 ವರ್ಷಗಳ ನಂತರ ಕುಗ್ರಾಮಗಳಿಗೆ ರಸ್ತೆ ಭಾಗ್ಯ | ಶಾಸಕ ಡಾ. ಎನ್ ಟಿ ಶ್ರೀನಿವಾಸ್ ಹೇಳಿಕೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಸ್ವಾತಂತ್ರ್ಯ ಬಂದು 76 ವರ್ಷಗಳ ನಂತರ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕುಮತಿ ಬೋಡಜ್ಜನ ಬಂಡೆ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಪಡಿಸಲು ಇಂದು ನನಸಾಗಿದೆ ಎಂದು ಶಾಸಕ ಡಾ.ಎನ್.ಟಿ ಶ್ರೀನಿವಾಸ್ ಹೇಳಿದರು.

ತಾಲೂಕಿನ ಎಕ್ಕೆಗುಂದಿ ಗ್ರಾಮದ ನೂತನ ಅಂಗನವಾಡಿ ಕೇಂದ್ರ ಕಟ್ಟಡ ಉದ್ಘಾಟನೆ 18.ಲಕ್ಷ, ಚಿರತಗುಂಡು ಗ್ರಾಮದಲ್ಲಿ ಸಿ.ಸಿ. ರಸ್ತೆ ಅಭಿವೃದ್ಧಿಗೆ 20.00 ಲಕ್ಷ, ವಲಸೆ ಕ್ರಾಸ್ ಇಂದ ನಡುವಲಹಳ್ಳಿ ರಸ್ತೆ ಅಭಿವೃದ್ಧಿ141 ಲಕ್ಷ, ಕುಮತಿ ಬೋಡಜ್ಜನಬಂಡೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಭೂಮಿಪೂಜೆ 102.00 ಲಕ್ಷ, ಪೂಜಾರಹಳ್ಳಿಯಿಂದ ಪಿಚ್ಚಾರಹಟ್ಟಿ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ ಭೂಮಿಪೂಜೆ, 142.67 ಲಕ್ಷ, ಪಿಚ್ಚಾರಹಟ್ಟಿ ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡ ಉದ್ಘಾಟನೆ 18,00 ಲಕ್ಷ, ಯಂಬಳಿ ವಡ್ಡರಹಟ್ಟಿ ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡ ಉದ್ಘಾಟನೆ 18.00 ಲಕ್ಷ, ಆಲೂರು ಗ್ರಾಮದಿಂದ ಯಂಬಳಿವರೆಗೆ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಭೂಮಿಪೂಜೆ 156.00 ಲಕ್ಷ, ಹುಲಿಕೆರೆ ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡ ಉದ್ಘಾಟನೆ 18,00 ಲಕ್ಷ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಕೆಲವೊಂದು ಗ್ರಾಮಗಳಲ್ಲಿ ದಶಕಗಳೇ ಕಳೆದರು ರಸ್ತೆ ಅಭಿವೃದ್ಧಿಗಳು ಕಂಡಿಲ್ಲ. ಕುಮತಿ ಬೋಡಜ್ಜನ ಬಂಡೆ ಹಾಗೂ ಬಾಂಬೆ ಕಾಲೋನಿ ಇಂತಹ ಗ್ರಾಮಗಳಲ್ಲಿ ಬಂಡಿ ಕಲ್ಲು, ಮುಳ್ಳು, ಮಣ್ಣಿನ ತಗ್ಗು ರಸ್ತೆ ಕೂಡಿದ್ದು ಇಂತಹ ಕುಗ್ರಾಮಗಳಲ್ಲಿ ಸ್ವಾತಂತ್ರ್ಯ ಬಂದು 76 ವರ್ಷ ಕಳೆದರೂ ಗ್ರಾಮಕ್ಕೆ ರಸ್ತೆ ಇರಲಿಲ್ಲ. ನಾನು ಚುನಾವಣೆ ಪ್ರಚಾರಕ್ಕೆ ಬಂದಾಗ ರಸ್ತೆ ಇಲ್ಲದನ್ನು ನೋಡಿ ನನಗೆ ತುಂಬಾ ನೋವಾಗಿತ್ತು. ಗ್ರಾಮದಲ್ಲಿ ಸುಮಾರು 35 ಕುಟುಂಬಗಳು ವಾಸವಿದ್ದು, 150ಕ್ಕೂ ಹೆಚ್ಚು ಜನಸಂಖ್ಯೆ ಈ ಗ್ರಾಮದಲ್ಲಿ ಇದ್ದಾರೆ. ಹಾಗಾಗಿ ಮೊದಲು ಈ ಗ್ರಾಮಕ್ಕೆ ರಸ್ತೆ ಕಲ್ಪಿಸಬೇಕೆನ್ನುವುದು ನನ್ನ ಕನಸಾಗಿತ್ತು ಇಂದು ನನಸಾಗಿದೆ. ತಾಲೂಕಿನ ವಿವಿಧ ಗ್ರಾಮೀಣ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಸುಗಮ ಸಂಚಾರ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಎಲ್ಲಾ ಗ್ರಾಮಗಳಿಗೆ ರಸ್ತೆ ನಿರ್ಮಿಸಲಾಗುತ್ತಿದೆ ಎಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ಸಮಾಜ ಸೇವಕರಾದ ಎನ್.ಟಿ ತಮ್ಮಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ತಮ್ಮಣ್ಣ, ಜಿ ಒಬಣ್ಣ, ಜುಮ್ಮೊಬನಹಳ್ಳಿ ಗ್ರಾ.ಪಂ ಅಧ್ಯಕ್ಷ ಸಾಕಮ್ಮ ಒಬಣ್ಣ, ಉಪಾಧ್ಯಕ್ಷೆ ಗಂಗಮ್ಮ ರುದ್ರೇಶ್, ಪೂಜಾರಹಳ್ಳಿ ಗ್ರಾ.ಪಂ ಅಧ್ಯಕ್ಷ ಜ್ಯೋತಿ ವೆಂಕಟೇಶ್, ಗ್ರಾ.ಪಂ ಸದಸ್ಯ ಪಾಲಾಕ್ಷಪ್ಪ, ಓಂಕಾರಪ್ಪ, ಪೆದ್ದ ಮಲ್ಲಯ್ಯ, ನಿವೃತ್ತಿ ಪಿಡಿಓ ಕೆ.ಎಂ ತಿಪ್ಪೇಸ್ವಾಮಿ, ಗ್ರಾ.ಪಂ ಸದಸ್ಯ ಪೋಸೆ ಪಾಪಣ್ಣ, ಲೋಕೋಪಯೋಗಿ ಇಲಾಖೆ ಎಇಇ ಕೆ.ನಾಗನಗೌಡ, ಪಂ.ರಾಜ್ ಇಂಜಿನಿಯರಿ ಎಇಇ ಮಲ್ಲಿಕಾರ್ಜುನ, ಮುಖಂಡ ಕುಂಟ ಬೋರಯ್ಯ, ಮಾಳಿಗೆ ದೊಡ್ಡ ಬೋರಯ್ಯ, ಗುತ್ತಿಗೆದಾರರು ಟಿ ವೀರಭದ್ರಪ್ಪ, ಬಿ ಆಶೋಕ್, ಬಿ ವೆಂಕಟೇಶ್ ಯಾದವ್, ಎನ್ ನಾಗರಾಜ್ ರೆಡ್ಡಿ, ಸಂಪತ್ ಕುಮಾರ್, ಎಸ್ ಕಲ್ಲೇಶ್ ಸೇರಿದಂತೆ ಮುಖಂಡರು, ಗ್ರಾ.ಪಂ ಸದಸ್ಯರು, ಸಾರ್ವಜನಿಕರು ಉಪಸಿತರಿದ್ದರು

# ಬಳ್ಳಾರಿ ಜಿಲ್ಲಾ ಪಂಚಾಯತ್‌ಗೆ ನರೇಗಾ ಪ್ರಶಸ್ತಿ

## ನಾಲ್ಕು ವಿಭಾಗಗಳಲ್ಲಿ ಅತ್ಯುತ್ತಮಸಾಧನೆ | ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹರ್ಷ




**ಹಂಪಿ ಟೈಮ್ಸ್ ಬಳ್ಳಾರಿ**

2023–24ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ಬಳ್ಳಾರಿ ಜಿಲ್ಲಾ ಪಂಚಾಯತ್ ಗೆ 'ನರೇಗಾ ಪ್ರಶಸ್ತಿ' ಸೇರಿ ಒಟ್ಟು ನಾಲ್ಕು ವಿಭಾಗಗಳಲ್ಲಿ ಪುರಸ್ಕಾರ ಲಭಿಸಿದೆ.

ಪ್ರಶಸ್ತಿ ವಿವರ(ಕಲ್ಬುರ್ಗಿ ವಿಭಾಗ): ಅತ್ಯುತ್ತಮ ಜಿಲ್ಲಾ ಪುರಸ್ಕಾರ– ಬಳ್ಳಾರಿ ಜಿಲ್ಲಾ ಪಂಚಾಯತಿ., ಅತ್ಯುತ್ತಮ ಜಿಲ್ಲಾ ಒಗ್ಗೂಡಿಸುವಿಕೆ ಪುರಸ್ಕಾರ– ಅರಣ್ಯ ಇಲಾಖೆ., ಅತ್ಯುತ್ತಮ ತಾಲ್ಲೂಕು ಪಂಚಾಯಿತಿ ಪುರಸ್ಕಾರ– ಸಂಡೂರು ತಾಲ್ಲೂಕು ಪಂಚಾಯಿತಿ., ಅತ್ಯುತ್ತಮ ಗ್ರಾಮ ಪಂಚಾಯಿತಿ ಪುರಸ್ಕಾರ– ದಮ್ಮೂರು ಗ್ರಾಮ ಪಂಚಾಯಿತಿ, ಕುರುಗೋಡು ತಾಲ್ಲೂಕು.

ಬೆಂಗಳೂರಿನ ವಸಂತ ನಗರದ ಅಂಬೇಡ್ಕರ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ನರೇಗಾ ಹಬ್ಬ–2025 ಕಾರ್ಯಕ್ರಮದಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಬಳ್ಳಾರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಪ್ರಶಸ್ತಿ ಸ್ವೀಕರಿಸಿದರು.

ಈ ವೇಳೆ ಗ್ರಾಮೀಣಾಭಿವೃದ್ಧಿ ಆಯುಕ್ತರಾದ ಪವನ್ ಕುಮಾರ್ ಮಾಲಪಾಟಿ, ಬಳ್ಳಾರಿ ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್ ಹಾಗೂ ಇತರರು ಇದ್ದರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಭಿನಂದಿಸಿದ್ದಾರೆ.

## ಅದ್ದೂರಿ ಕಾರ್ಯಕ್ರಮ ಆಯೋಜನೆಗೆ ಸಿದ್ಧತೆ ಕೈಗೊಳ್ಳಿ: ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ನಿರ್ದೇಶನ

# ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ಬುಡಕಟ್ಟು ಉತ್ಸವ

**ಹಂಪಿ ಟೈಮ್ಸ್ ಬಳ್ಳಾರಿ**



ಬರುವ ಮಾರ್ಚ್ ಮೊದಲ ವಾರದಲ್ಲಿ ಬಳ್ಳಾರಿಯಲ್ಲಿ ರಾಜ್ಯಮಟ್ಟದ 'ಬುಡಕಟ್ಟು ಉತ್ಸವ' ಆಯೋಜಿಸಲಾಗುತ್ತಿದ್ದು, ಬುಡಕಟ್ಟು ಸಮುದಾಯದ ಭಾಷೆ, ಕಲೆ, ಸಂಸ್ಕೃತಿ, ಆಚಾರ–ವಿಚಾರ ಮತ್ತು ಉಡುಗೆ–ತೊಡುಗೆ ಬಿಂಬಿಸಲು ಅದ್ದೂರಿ ಕಾರ್ಯಕ್ರಮ ಆಯೋಜನೆಗೆ ಸಕಲ–ಸಿದ್ಧತೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರ ಅವರು ಹೇಳಿದರು.

ರಾಜ್ಯಮಟ್ಟದ ಬುಡಕಟ್ಟು ಉತ್ಸವವನ್ನು ಬಳ್ಳಾರಿಯಲ್ಲಿ ಆಯೋಜಿಸುವ ಕುರಿತು ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2024–25 ನೇ ಸಾಲಿನ ಪರಿಷ್ಟ ಪಂಗಡ ಉಪಯೋಜನೆಯಡಿ ರಾಜ್ಯ ಮಟ್ಟದ 'ಬುಡಕಟ್ಟು ಉತ್ಸವ' ಕಾರ್ಯಕ್ರಮವನ್ನು ಬಳ್ಳಾರಿಯಲ್ಲಿ ಆಯೋಜಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ.ಕಾರ್ಯಕ್ರಮಯಶಸ್ವಿಗೊಳಿಸಲು ರೂಪು–ರೇಷೆ ಕೈಗೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಬಳ್ಳಾರಿಯಲ್ಲಿ ಮೊಟ್ಟ–ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ಒಂದು ದಿನದ ರಾಜ್ಯ ಮಟ್ಟದ 'ಬುಡಕಟ್ಟು ಉತ್ಸವ' ದ ಸ್ಥಳ ಮತ್ತು ದಿನ ನಿಗದಿಪಡಿಸುವ ಕುರಿತು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗುವುದು. ಇದಕ್ಕೆ ಬೇಕಾದ ಎಲ್ಲಾ ರೀತಿಯ ಸಲಹೆ–ಸೂಚನೆ ಬುಡಕಟ್ಟು ಸಮುದಾಯದ ಮುಖಂಡರಿಂದ ಪಡೆಯಬೇಕು ಎಂದರು.

ರಾಜ್ಯಮಟ್ಟದಕಾರ್ಯಕ್ರಮವಾಗಿರುವುದರಿಂದ ರಾಜ್ಯದ ವಿವಿಧೆಡೆಯಿಂದ 600 ಕ್ಕೂ ಹೆಚ್ಚು ಕಲಾವಿದರು ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಅವರಿಗೆಲ್ಲಾ ತಂಗಲು ಊಟ–ವಸತಿ ವ್ಯವಸ್ಥೆ, ವಾಹನ ವ್ಯವಸ್ಥೆ ಕೈಗೊಳ್ಳಲು ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಜಿಲ್ಲೆಯ ವಿವಿಧ ಪರಿಶಿಷ್ಟ ವರ್ಗಗಳ ವಸತಿ ನಿಲಯ ಮತ್ತು ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಹ ಭಾಗವಹಿಸಲು ಬುಡಕಟ್ಟು ಸಮುದಾಯದ ಕುರಿತಾಗಿ ಕವಿತೆಗಳು, ಕಾವ್ಯ, ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆ ಆಯೋಜಿ ಸಬೇಕು. ಕಾರ್ಯಕ್ರಮದಲ್ಲಿ ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಬೇಕು ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬೆಂಗಳೂರು ವಲಯ ಜಂಟಿ ನಿರ್ದೇಶಕ ಅಶೋಕ ಚೆಲವಾದಿ ಅವರು ಮಾತನಾಡಿ, ಬುಡಕಟ್ಟು ಉತ್ಸವವು ಪರಿಶಿಷ್ಟ ಪಂಗಡದ ವಿವಿಧ ಬುಡಕಟ್ಟು ಸಮುದಾಯದ ಕಲಾವಿದರಿಗೆ ಅವರ ಸಾಹಿತ್ಯ, ಕಲೆ ಪ್ರದರ್ಶಿಸಲು ವೇದಿಕೆ ಕಲ್ಪಿಸಿಕೊಡುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಸಮುದಾಯದಲ್ಲಿ ಕವಿಗಳು, ಜಾನಪದ, ನೃತ್ಯ, ಸಂಗೀತ ಮತ್ತು ಚಿತ್ರ ಕಲಾವಿದರು, ಶಿಲ್ಪೆ ಕಲಾವಿದರು ಸಹ ಇದ್ದು, ಅವರಿಗೂ ಅವಕಾಶ ಕಲ್ಪಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಬುಡಕಟ್ಟು ಸಮುದಾಯದ ಮುಖಂಡರು ಮಾತನಾಡಿ, ಜಿಲ್ಲೆಯ ಐದು ತಾಲ್ಲೂಕುಗಳನ್ನೊಳಗೊಂಡ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಬೇಕು. ಮುಖ್ಯವಾಗಿ ಅಳಿವಿನಂಚಿನಲ್ಲಿರುವ ಬುಡಕಟ್ಟು ನೆಲೆಗಳನ್ನು ಬಿಂಬಿಸುವಂತಹ ಜನಮಾನಸ ಕಾರ್ಯಕ್ರಮ ವಾಗಬೇಕು. ಬುಡಕಟ್ಟು ಸಮುದಾಯದ ವೇಶ–ಭೂಷಣ ಪ್ರದರ್ಶಿಸಲು ವಸ್ತು–ಪ್ರದರ್ಶನ ಮಳಿಗೆ ಹಾಕಬೇಕು ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಲಬುರಗಿ ವಲಯ ಜಂಟಿ ನಿರ್ದೇಶಕ ಬಸವರಾಜ ಹುಗಾರ, ಬಳ್ಳಾರಿಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಪರಿಶಿಷ್ಟ ವರ್ಗಗಳ ಕಲ್ಯಾಣಾ ಧಿಕಾರಿ ದಿವಾಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಬುಡಕಟ್ಟು ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಗಣಿತ ಪಾಸಾಗಲು ಸುಲಭ ಅಂಶಗಳು
ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!

## ಅಲ್ಪಸಂಖ್ಯಾತರ ಮೊರಾರ್ಜಿ, ಡಾ.ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

2025–26 ನೇ ಶೈಕ್ಷಣಿಕ ವರ್ಷಕ್ಕೆ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆಂಗ್ಲ ಮಾಧ್ಯಮ ಮತ್ತು ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಸಿಬಿಎಸ್‌ಇ ವಸತಿ ಶಾಲೆಯ ದಾಖಲಾತಿಗೆ 6 ನೇ ತರಗತಿಗೆ ಪ್ರವೇಶಕ್ಕಾಗಿ ಅರ್ಜಿ ಅಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಗುಂಡಪ್ಪ ತಿಳಿಸಿದ್ದಾರೆ.

ಈ ವಸತಿ ಶಾಲೆಗಳಲ್ಲಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75% ರಷ್ಟು, ಇತರೆ ಸಮುದಾಯಕ್ಕೆ ಶೇ.25% ರಷ್ಟು ಪ್ರವೇಶಾತಿಯಲ್ಲಿ ಮಿಸಲಾತಿ ಇರುತ್ತದೆ. ವಿದ್ಯಾರ್ಥಿಗಳ ಪ್ರವೇಶಕ್ಕಾಗಿ ಆನ್‌ಲೈನ್ ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಹಾಗೂ ಪಾಲಕರು ಸೇವಾಸಿಂಧು ಪೋರ್ಟಲ್ ಲಿಂಕ್ https://sevasindhuservices.karnataka.gov.in ಮೂಲಕ ಮಾ.10 ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲೆಯ ಎಲ್ಲಾ ಅಲ್ಪಸಂಖ್ಯಾತರ ತಾಲೂಕು ಮಾಹಿತಿ ಕೇಂದ್ರಗಳು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಬಹುದು. ಹೆಚ್ಚಿನ ವಿವರಗಳನ್ನು http://dom.karnataka.gov.in ವೆಬ್ ಸೈಟ್ ನಲ್ಲಿ ನೋಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಕಾಯಕ ಶರಣರ ಜಯಂತಿಯನ್ನು ಭಕ್ತಿ ಪೂರ್ವಕವಾಗಿ ಆಚರಿಸಿ

### ನೌ.ಸಂಘದ ತಾಲೂಕಧ್ಯಕ್ಷ ಎಸ್.ವೆಂಕಟೇಶ ಹೇಳಿಕೆ



**ಹಂಪಿ ಟೈಮ್ಸ್ ಕೂಡ್ಲಿಗಿ**

ಕಾಯಕ ಶರಣರಾದ ಮಾದಾರ ಚೆನ್ನಯಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ದೂಳಯ್ಯ ಹಾಗೂ ಉರಿಲಿಂಗ ಪೆದ್ದಿಯವರ ಜಯಂತಿ ಯನ್ನು ತಾಲೂಕಿನಾದ್ಯಂತ ಸರಳವಾಗಿ ಅತ್ಯಂತ ಭಕ್ತಿಪೂರ್ವಕವಾಗಿ ಎಲ್ಲರೂ ಆಚರಣೆ ಮಾಡುವಂತೆ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ ತಿಳಿಸಿದರು.

ಪಟ್ಟಣದ ತಾಲೂಕು ಆಡಳಿತದ ವತಿಯಿಂದ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಸರ್ಕಾರ ಈಗಾಗಲೇ ಹಲವು ಶರಣರ ಜಯಂತಿಗಳನ್ನು ಆಚರಿಸಲು ಸೂಚಿಸಿದ್ದು, ಅದರಂತೆ ಈ ಶರಣರು ಸಹ ಸಮಾಜದ ಅಸ್ತಿತ್ವಕ್ಕೆ ದುಡಿದ ಮಹನೀಯರು ಇವರ ಜಯಂತಿಯನ್ನು ಕೇವಲ ಆಚರಣೆ ಮಾಡಿದರೆ ಸಾಲದು ಅವರ ತತ್ವಾದರ್ಶಗಳನ್ನು ಮಕ್ಕಳಿಗೆ ತಿಳಿಸಬೇಕು. ಕೇವಲ ಒಂದು ಜಾತಿಗೆ ಸೀಮಿತ ಮಾಡದೇ ಸಮಾಜದ ಉದ್ಧಾರಕ್ಕಾಗಿ ಶ್ರಮಿಸಿದವರು ಅವರ ಚಿಂತನೆಗಳೇ ನಮಗೇ ದಾರಿದೀಪ ಎಂದರು. ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಸ್.ದುರುಗೇಶ್ ಮಾತನಾಡಿ, ಕಾಯಕ ಶರಣರ ಜಯಂತಿಯನ್ನು ತಾಲೂಕು ಕಚೇರಿ, ಗ್ರಾಪಂ ಮತ್ತು ಶಾಲಾ, ಕಾಲೇಜುಗಳಲ್ಲಿ ಆಚರಣೆ ಮಾಡಿದರೆ ಸಾಲದು ಸರ್ಕಾರಿ ಸ್ವಾಮ್ಯದ ಎಲ್ಲಾ ಕಚೇರಿಗಳಲ್ಲಿ ಆಚರಿಸಲು ತಹಸೀಲ್ದಾರ್ ಸೂಚನೆ ನೀಡಬೇಕು ಎಂದರು. ಬಹುತೇಕ ಬ್ಯಾಂಕ್, ಸಹಕಾರ ಸಂಘಗಳಲ್ಲಿ ಮಹನೀಯರ ಜಯಂತಿಯನ್ನು ಆಚರಣೆ ಮಾಡುವುದೇ ಇಲ್ಲ ಅತಂಹ ಅಗೌರವ ಕಂಡುಬಂದ ಮಾಹಿತಿ ಸಿಕ್ಕರೆ ಅವರ ವಿರುದ್ಧ ತಾಲೂಕು ಆಡಳಿತ ಶಿಸ್ತುಕ್ರಮಕ್ಕೆ ಮುಂದಾಗಬೇಕು ಎಂದು ಸಭೆಯಲ್ಲಿ ತಿಳಿಸಿದರು. ಶಿರಸ್ತೆದಾರ ಮಹಮ್ಮದ್ ಗೌಸ್, ಕುಮಾರ್ ಮಾಕನಡಕು, ಎಎಸ್‌ಐ ಬಂಡ್ರಿ ಬಸವರಾಜ, ಕಾರ್ಮಿಕ ನಿರೀಕ್ಷಕ ಶಿವಶಂಕರ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

## ಸ್ಥಗಿತಗೊಂಡ ಸಹಕಾರ ಸಂಘಗಳ ಸಮಾಪನೆ: ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯಕ್ಕೆ ಒಳಪಡುವ ವಿವಿಧ ಸೌಹಾರ್ದ ಸಹಕಾರಿ ಸಂಘಗಳು ತಮ್ಮ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ನಿರ್ವಹಿಸದೇ ಸ್ಥಗಿತಗೊಂಡಿರುವುದರಿಂದ ಅವುಗಳನ್ನು ಸಮಾಪನೆಗೊಳಿಸಲು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಗಮದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಜಿಲ್ಲಾ ಸಂಯೋಜಕರು ಶಿಫಾರಸ್ಸು ಮಾಡಿರುತ್ತಾರೆ. ಈ ಕುರಿತು ಯಾರಿಂದಲಾದರೂ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು.

ವಿಜಯನಗರ ಜಿಲ್ಲೆಯ ಹೊಸಪೇಟೆಯ ಗುರು ಗಾದಿಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿಗಮ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಚಿಂತ್ರಪಳ್ಳಿಯ ವತ್ಸಲಾಬಾಯಿ ಮಹಿಳಾ ಮೈಕ್ರೋ ಫೈನಾನ್ಸ್ ಸೌಹಾರ್ದ ಸಹಕಾರಿ ನಿಗಮ, ಇವುಗಳು ತಮ್ಮ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ನಿರ್ವಹಿಸದೇ ಸ್ಥಗಿತಗೊಂಡಿರುತ್ತವೆ.

ಹಾಗಾಗಿ ಸೌಹಾರ್ದ ಸಹಕಾರಿ ಸಂಘಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಸಂಘಗಳ ಅಧಿನಿಯಮ, 1997 ರ 48(2)(ಬಿ) ರನ್ವಯ ಏಕೆ ಸಮಾಪನೆಗೊಳಿಸಬಾರದು ಎಂಬುವುದಕ್ಕೆ ಪ್ರಕಟಣೆಗೊಂಡ 7 ದಿನಗಳೊಳಗಾಗಿ ಸಂಘಗಳ ಕಾರ್ಯದರ್ಶಿಯವರಿಂದ ಅಥವಾ ಸದಸ್ಯರಿಂದ, ಇಲ್ಲವೇ ಯಾರಿಂದಲಾದರೂ ಆಕ್ಷೇಪಣೆಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ನಗರದ ಜನತಾ ಬಜಾರ್ ಕಟ್ಟಡದ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯಕ್ಕೆ ಸಲ್ಲಿಸಬೇಕು.

ತಪ್ಪಿದಲ್ಲಿ ಸೌಹಾರ್ದ ಸಹಕಾರಿ ಸಂಘಗಳನ್ನು ನಿಯಮಾನುಸಾರ ಸಮಾಪನೆಗೆ ಕ್ರಮ ವಹಿಸಲಾಗುವುದು ಎಂದು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**–: ಪ್ರಯತ್ನಿಸು :–**

ನೀವು ಹಲವು ಬಾರಿ ಸೋಲಬಹುದು ಆದರೆ ನಿರಂತರ ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.